# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟಿ

ದಾವಣಗೆರೆ
ಬುಧವಾರ, ಜುಲೈ 14, 2021

ಸಂಪುಟ : 48 ಸಂಚಿಕೆ : 61 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




## ಮೇಲ್ಸೇತುವೆಗೆ ರಾಯಣ್ಣನ ಹೆಸರು

ದಾವಣಗೆರೆ, ಜು. 13 - ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಗರದ ಪಿ.ಬಿ. ರಸ್ತೆಯ ಬಿಎಸ್ಸೆನ್ನೆಲ್ ಕಚೇರಿ ಎದುರು ನಿರ್ಮಾಣವಾಗಿರುವ ಮೇಲ್ಸೇತುವೆಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಎಂದು ನಾಮಕರಣಗೊಳಿಸಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ಇಂದು ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಸಚಿವರು, ಮೇಲ್ಸೇತುವೆಗೆ ಸಂಗೊಳ್ಳಿ ರಾಯಣ್ಣ ಎಂದು ಮಹಾನಗರ ಪಾಲಿಕೆ ವತಿಯಿಂದ ನಾಮಕರಣ ಮಾಡಲಾಗಿದೆ. ಇದಕ್ಕೆ ಬಹಳ ಹೆಮ್ಮೆಯಾಗುತ್ತಿದೆ. ಅಂತಹ ಮಹಾಪುರುಷರ ಹೆಸರನ್ನು ಈ ಜಾಗಕ್ಕೆ ನಾಮಕರಣ ಮಾಡಿರುವುದು ಉತ್ತಮ ಸೇವೆ ಎಂದು ಶ್ಲಾಘಿಸಿದರು.

### ಸ್ಮಾರ್ಟ್ ಸಿಟಿ ಕಾಮಗಾರಿಗಳಿಗೆ ಭೈರತಿ ಬಸವರಾಜ್ ಚಾಲನೆ

ನಂತರದಲ್ಲಿ ಸಚಿವರು ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಳ್ಳಲಾಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆ ಮತ್ತು ಉದ್ಘಾಟನೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಎಸ್.ಎ. ರವೀಂದ್ರನಾಥ್, ಶಾಮನೂರು ಶಿವಶಂಕರಪ್ಪ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಸಿ.ಬಿ. (2ನೇ ಪುಟಕ್ಕೆ)

# 3ನೇ ಅಲೆ ತಾನಾಗಿಯೇ ಬರದು

## ಮೂರನೇ ಅಲೆಗೂ ಮುನ್ನ ಮೋಜು ಮಾಡುವ ಭಾವನೆ ಸರಿಯಲ್ಲ: ಮೋದಿ

ನವದೆಹಲಿ, ಜು. 13 - ಕೊರೊನಾ ನಡುವೆಯೂ ಗಿರಿಧಾಮ ಹಾಗೂ ಮಾರುಕಟ್ಟೆಗಳಲ್ಲಿ ಜನರು ಮಾಸ್ಕ್ ಧರಿಸದೇ ಗುಂಪು ಗೂಡುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಜನರು ಉದಾಸೀನದ ಮನೋಭಾವ ಹೊಂದಬಾರದು ಎಂದಿದ್ದಾರೆ.

ನಾವು ಎಚ್ಚರಿಕೆ ಹಾಗೂ ಮುನ್ನೆಚ್ಚರಿಕೆ ಹೊಂದಿದ್ದರೆ ಮಾತ್ರ ಮೂರನೇ ಅಲೆ ತಡೆಯಲು ಸಾಧ್ಯ. ಇದರಲ್ಲಿ ಯಾವುದೇ ಹೊಂದಾಣಿಕೆ ಇಲ್ಲ ಎಂದು ಮೋದಿ ಹೇಳಿದ್ದಾರೆ.

ಈಶಾನ್ಯದ ಎಂಟು ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ನಡೆಸಿದ ಪ್ರಧಾನಿ, ಈಶಾನ್ಯದ ಕೆಲ ಜಿಲ್ಲೆಗಳಲ್ಲಿ ಕೊರೊನಾ ಪರಿಸ್ಥಿತಿ ಚಿಂತಾಜನಕವಾಗಿದೆ. ಮುಖ್ಯಮಂತ್ರಿಗಳು ಎಚ್ಚರವಾಗಿರಬೇಕು ಹಾಗೂ ವೈರಸ್ ಮತ್ತಷ್ಟು ಹರಡುವುದನ್ನು ತಪ್ಪಿಸಬೇಕು ಎಂದಿದ್ದಾರೆ.

ಬೇರು ಹಂತದಲ್ಲಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮೈಕ್ರೋ ಕಂಟೈನ್‌ಮೆಂಟ್ ವಲಯಗಳ ಬಗ್ಗೆ ಹೆಚ್ಚು ಒತ್ತು ನೀಡಬೇಕು ಎಂದು ಪ್ರಧಾನಿ ತಿಳಿಸಿದ್ದಾರೆ.

ಪರಿಣಿತರು ಕೊರೊನಾ ರೂಪಾಂತರಿಗಳ ಬಗ್ಗೆ ಅಧ್ಯಯನ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕೊರೊನಾ ಹರಡುವುದನ್ನು ತಡೆಯುವುದು ಹಾಗೂ ಚಿಕಿತ್ಸೆ ನೀಡುವುದು ಮುಖ್ಯವಾಗಿದೆ ಎಂದಿದ್ದಾರೆ.



### ಜನರು ಮಾಸ್ಕ್ ಧರಿಸದೇ ಗುಂಪು ಸೇರುವುದಕ್ಕೆ ಪ್ರಧಾನಿ ಕಳವಳ

ದೈಹಿಕ ಅಂತರ, ಮಾಸ್ಕ್, ಲಸಿಕೆಗಳಿಗೆ ಒತ್ತು ನೀಡುವಂತೆ ಹೇಳಿರುವ ಪ್ರಧಾನ ಮಂತ್ರಿ, ಟೆಸ್ಟ್ ಮಾಡುವುದು, ಗುರುತಿಸುವುದು ಹಾಗೂ ಚಿಕಿತ್ಸೆ ನೀಡುವುದು ಸಾಬೀತಾದ ವಿಧಾನಗಳಾಗಿವೆ ಎಂದಿದ್ದಾರೆ.

ಕೊರೊನಾ ಕಾರಣದಿಂದ ಪ್ರವಾಸೋದ್ಯಮ, ವ್ಯಾಪಾರ ಹಾಗೂ ಉದ್ಯಮಗಳ ಮೇಲೆ ಭಾರೀ ಪರಿಣಾಮವಾಗಿದೆ. ಆದರೆ, ಗಿರಿಧಾಮಗಳಲ್ಲಿ ಮತ್ತು ಮಾರುಕಟ್ಟೆಗಳಲ್ಲಿ ಹೆಚ್ಚು ಜನ ಮಾಸ್ಕ್ ಧರಿಸದೇ ಸೇರುತ್ತಿರುವುದು ಕಳವಳಕಾರಿ ಎಂದು ಮೋದಿ ತಿಳಿಸಿದ್ದಾರೆ.

ಮೂರನೇ ಅಲೆ ಬರುವುದಕ್ಕೂ ಮುಂಚೆ ಮೋಜು ಮಾಡೋಣ ಎಂಬ ಭಾವನೆ ಸರಿಯಲ್ಲ ಎಂದಿರುವ ಅವರು, ಮೂರನೇ ಅಲೆ ತಾನಾಗಿಯೇ ಬರುವುದಿಲ್ಲ ಎಂದು ಹೇಳಿದ್ದಾರೆ.

## ರಾಜ್ಯದಲ್ಲೂ ಹೊಸ ಜನಸಂಖ್ಯಾ ನೀತಿಗೆ ಕಾಲ ಪಕ್ವ



ಬೆಂಗಳೂರು, ಜು. 13 - ಉತ್ತರ ಪ್ರದೇಶ ಹಾಗೂ ಅಸ್ಸಾಂ ರಾಜ್ಯಗಳ ಮಾದರಿಯಲ್ಲೇ ರಾಜ್ಯದಲ್ಲೂ ಹೊಸ ಜನಸಂಖ್ಯಾ ನೀತಿಯನ್ನು ಜಾರಿಗೊಳಿಸಲು ಕಾಲ ಪಕ್ವವಾಗಿದೆ ಎಂದು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಶಾಸಕ ಸಿ.ಟಿ. ರವಿ ಹೇಳಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಅಲ್ಲಿನ ರಾಜ್ಯಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ನಿಯಂತ್ರಿಸಲು ನೂತನ ಜನಸಂಖ್ಯಾ ನೀತಿಯನ್ನು ರೂಪಿಸಿದ್ದು, ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಜಾರಿಗೊಳಿಸಬೇಕು ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಈಗಾಗಲೇ 7 ಕೋಟಿ ಜನಸಂಖ್ಯೆ ಮೀರಿದೆ. ಇದರ ಬೆಳವಣಿಗೆಗೆ ಅವಕಾಶ ನೀಡಬಾರದು. ಉತ್ತರ ಪ್ರದೇಶದ ಮುಖ್ಯಮಂತ್ರಿಯವರು ಎರಡು ಮಕ್ಕಳಿಗಿಂತ ಹೆಚ್ಚಿದ್ದರೆ, ಅಂತಹ ಕುಟುಂಬಗಳಿಗೆ ಸರ್ಕಾರಿ ಉದ್ಯೋಗದಿಂದ ವಂಚಿತರಾಗುವುದೂ ಸೇರಿದಂತೆ ಅನೇಕ ಸವಲತ್ತುಗಳನ್ನು ಖಡಿತ ಮಾಡುವ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ. ಅದನ್ನೇ ರಾಜ್ಯದಲ್ಲಿ ಜಾರಿಗೊಳಿಸಲು ಕಾಲ ಪಕ್ವವಾಗಿದೆ ಎಂದರು.

## 36 ಪಾಸಿಟಿವ್ 109 ಗುಣಮುಖ

ದಾವಣಗೆರೆ, ಜು.13- ಜಿಲ್ಲೆಯಲ್ಲಿ ಮಂಗಳವಾರ 36 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಇಬ್ಬರು ಸಾವನ್ನಪ್ಪಿದ್ದಾರೆ. 109 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 18, ಹರಿಹರ 4, ಜಗಳೂರು 1, ಚನ್ನಗಿರಿ 12, ಹೊನ್ನಾಳಿ ತಾಲ್ಲೂಕಿನಲ್ಲಿ ಒಬ್ಬರಿಗೆ ಸೋಂಕು ದೃಢಪಟ್ಟಿದೆ.

ಜಿಲ್ಲೆಯಲ್ಲಿ 420 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 583 ಜನರು ಮೃತಪಟ್ಟಿದ್ದಾರೆ.

## ಗ್ರಾಮೀಣರ ಎಲ್ಲ ಮನೆಗಳಿಗೂ ನಲ್ಲಿ ಸಂಪರ್ಕ: ಯಡಿಯೂರಪ್ಪ

ಬೆಂಗಳೂರು, ಜು.13 - ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನಂತೆ ಗ್ರಾಮೀಣ ಭಾಗದ ಎಲ್ಲ ಮನೆಗಳಿಗೂ ಕೊಳಾಯಿ ನೀರು ದೊರಕಿಸುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಇಂದು ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಜಲಜೀವನ್ ಮಿಷನ್ ಯೋಜನೆಯ ಪ್ರಗತಿ ಪರಿಶೀಲಿಸಿದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲ ಹಂತದಲ್ಲಿ 25 ಲಕ್ಷ ಮನೆಗಳಿಗೆ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಜಲಾನಯನ ಪ್ರದೇಶಗಳಿಂದ ಸಮೀಪದ ಗ್ರಾಮಗಳಿಗೆ ನೇರವಾಗಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗುವುದು ಎಂದವರು ಹೇಳಿದ್ದಾರೆ.

ಕರ್ನಾಟಕದ ಜಲಜೀವನ್ ಮಿಷನ್ (3ನೇ ಪುಟಕ್ಕೆ)

## ಆಧಾರ್ ಸಂಖ್ಯೆ ಬದಲಿಸಲು ಮನವಿ

### ಕಾಯ್ದೆಯಲ್ಲಿದೆ ಅವಕಾಶ, ಕೇಂದ್ರ ವಿವರ ಸಲ್ಲಿಸಲಿ: ಹೈಕೋರ್ಟ್



ನವದೆಹಲಿ, ಜು.13 - ಹಾಲಿ ಆಧಾರ್ ಕಾರ್ಡ್ ಹೊಂದಿರುವವರು ಹೊಸ ಸಂಖ್ಯೆ ಪಡೆಯುವ ಬಗ್ಗೆ ವ್ಯವಸ್ಥೆ ಹಾಗೂ ಪ್ರಕ್ರಿಯೆ ರೂಪಿಸುವಂತೆ ದಾಖಲಾಗಿರುವ ಅರ್ಜಿಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ತನ್ನ ಪ್ರತಿಕ್ರಿಯೆ ನೀಡಬೇಕೆಂದು ದೆಹಲಿ ಹೈಕೋರ್ಟ್ ತಿಳಿಸಿದೆ.

ತಮ್ಮ ಆಧಾರ್ ಸಂಖ್ಯೆಯ ಮಾಹಿತಿ ವಿದೇಶದಲ್ಲಿ ಸೋರಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಹೊಸ ಆಧಾರ್ ಸಂಖ್ಯೆ ನೀಡಬೇಕೆಂದು ಉದ್ಯಮಿ ರಾಜನ್ ಅರೋರ ಎಂಬುವವರು ದಾಖಲಿಸಿರುವ ಅರ್ಜಿಯ ವಿಚಾರಣೆ ನಡೆಸಿರುವ ನ್ಯಾಯಮೂರ್ತಿ ರೇಖಾ ಪಲ್ಲಿ, ಕೇಂದ್ರ ಹಾಗೂ ಆಧಾರ್ ಸಂಖ್ಯೆ ನೀಡುವ ಯು.ಐ.ಡಿ.ಎ.ಐ.ಗಳಿಗೆ ಪ್ರತಿಕ್ರಿಯೆ ಸಲ್ಲಿಸಲು ಹೇಳಿದ್ದಾರೆ.

ತಮ್ಮ ಖಾಸಗಿತನದ ಹಕ್ಕು ರಕ್ಷಿಸಬೇಕು ಹಾಗೂ ಇನ್ನಷ್ಟು ಹಾನಿಯಾಗುವುದನ್ನು ತಡೆಯಬೇಕು ಎಂದು ಅರೋರ ಅವರು ನ್ಯಾಯಾಲಯದ ರಕ್ಷಣೆ ಕೋರಿದ್ದಾರೆ.

ಯು.ಐ.ಡಿ.ಎ.ಐ. ಪರವಾಗಿ ಹಾಜರಿದ್ದ ವಕೀಲ ಜೊಹೇಬ್ ಹೊಸೇನ್, ಆಧಾರ್ ಸಂಖ್ಯೆ ನೀಡಿದ ತಕ್ಷಣ ಆಜೀವ 'ಲಾಕ್' ಆಗಿರುತ್ತದೆ ಎಂದು ಹೇಳಿದರು. ಆದರೆ, ಈ ವಾದ ಒಪ್ಪದ ನ್ಯಾಯಾಲಯ, (3ನೇ ಪುಟಕ್ಕೆ)

## ಜಗಳೂರಿನಲ್ಲಿ 10 ಕೋ.ರೂ. ಕಾಮಗಾರಿಗಳಿಗೆ ಚಾಲನೆ

ಜಗಳೂರು, ಜು.13 - ಕೋವಿಡ್‌ನಿಂದ ಮೃತರಾದ ಬಡ ಕುಟುಂಬಗಳಿಗೆ ಸರ್ಕಾರದಿಂದ 1 ಲಕ್ಷ ರೂ. ಪರಿಹಾರನ್ನು ಶೀಘ್ರವೇ ನೀಡಲಾಗುವುದು ಎಂದು ನಗರಾಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹೇಳಿದರು.

ಜಗಳೂರು ಪಟ್ಟಣದ ತರಳಬಾಳು ಸಮುದಾಯ ಭವನದಲ್ಲಿ ಇಂದು ಏರ್ಪಡಿಸಲಾಗಿದ್ದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಫುಡ್‌ಕಿಟ್ ವಿತರಿಸಿ ಅವರು ಮಾತನಾಡಿದರು.

ಜಗಳೂರಿನಲ್ಲಿ ಕೋವಿಡ್‌ನಿಂದ ಮೃತರಾದ 20 ಕುಟುಂಬಗಳಿವೆ. ಅವರೆಲ್ಲರಿಗೂ ಶಾಸಕ ರಾಮಚಂದ್ರಪ್ಪ ನವರ ಜೊತೆಗೂಡಿ ಪರಿಹಾರ ವಿತರಿ ಸಲಾಗುವುದು. ಹಾಗೂ ಪಟ್ಟಣದಲ್ಲಿ 10 ಕೋಟಿ ರೂ ವೆಚ್ಚದ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದರು. (3ನೇ ಪುಟಕ್ಕೆ)

## ಸೆ.11ರಂದು ನೀಟ್ - ಪಿ.ಜಿ. ಪರೀಕ್ಷೆ

ನವದೆಹಲಿ, ಜು. 13 – ನೀಟ್ - ಪಿ.ಜಿ. ಪರೀಕ್ಷೆ ಸೆಪ್ಟೆಂಬರ್ 11ರಂದು ನಡೆಯಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ ಸುಖ್ ಮಾಂಡವೀಯ ತಿಳಿಸಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಏಪ್ರಿಲ್ 18ರಂದು ನಡೆಯಬೇಕಿದ್ದ ನೀಟ್ - ಪಿ.ಜಿ. ಪರೀಕ್ಷೆಯನ್ನು ಮುಂದೂಡಲಾಗಿತ್ತು. ಈಗ ಸೆಪ್ಟೆಂಬರ್ 11ರ ಬೆಳಿಗ್ಗೆ 9ರಿಂದ 12.30ರವರೆಗೆ ನೀಟ್ -ಪಿ.ಜಿ. ಪರೀಕ್ಷೆ ನಡೆಯಲಿದೆ ಎಂದು ತಿಳಿಸಲಾಗಿದೆ.

### ಭದ್ರಾ ಜಲಾಶಯ

ಇಂದಿನ ಮಟ್ಟ : 156 ಅಡಿ 8 ಇಂಚು
ಒಳ ಹರಿವು: 5029 ಕ್ಯೂಸೆಕ್ಸ್
ಹೊರ ಹರಿವು : 782 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 147.6 ಅಡಿ

# ಹರಿಹರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಅಸಾಧ್ಯ

## ಜಮೀನು, ನೀರು ಇದ್ದ ಮಾತ್ರಕ್ಕೆ ಕಾಲೇಜು ಸ್ಥಾಪನೆಗೆ ಕೇಂದ್ರ ವೈದ್ಯಕೀಯ ಇಲಾಖೆ ಒಪ್ಪದು: ಸಚಿವ ಭೈರತಿ



ಹರಿಹರ, ಜು.13- ಕೇವಲ ಜಮೀನು, ನೀರು ಇದ್ದ ಮಾತ್ರಕ್ಕೆ ಹರಿಹರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಕೇಂದ್ರ ವೈದ್ಯಕೀಯ ಇಲಾಖೆ ಒಪ್ಪುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಸ್ಪಷ್ಟಪಡಿಸಿದ್ದಾರೆ.

ವೈದ್ಯಕೀಯ ಕಾಲೇಜು ಸ್ಥಾಪನೆ ಕುರಿತಂತೆ ನಗರದ ಹೊರ ವಲಯದ ಕಾಗಿನೆಲೆ ಗುರುಪೀಠದ ಸಭಾಂಗಣದಲ್ಲಿ ತಾಲ್ಲೂಕಿನ ವಿವಿಧ ಮಠದ ಶ್ರೀಗಳ ಮತ್ತು ಸಚಿವರ ಹಾಗೂ ಸಂಸದರು ನೇತೃತ್ವದಲ್ಲಿ ಇಂದು ನಡೆದ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ಅದರದೇ ಆದ ನಿಬಂಧನೆಗಳಿರುತ್ತವೆ. ಕಳೆದ ಮೂರು ವರ್ಷಗಳ ಹಿಂದೆ ಚಿತ್ರದುರ್ಗದಲ್ಲಿ ಪ್ರಾರಂಭಿಸುತ್ತಿರುವ ಮೆಡಿಕಲ್ ಕಾಲೇಜಿಗೆ ಸಂಬಂಧಿಸಿದ ಸಮಸ್ಯೆಗಳಿಗೇ ಪರಿಹಾರ ದೊರೆತಿಲ್ಲ. ದಾವಣಗೆರೆ ನಗರದಲ್ಲಿನ ಚಿಗಟೇರಿ ಸಾರ್ವಜನಿಕ ಆಸ್ಪತ್ರೆ 930 ಹಾಸಿಗೆ ಇದ್ದದ್ದನ್ನು ಕೋವಿಡ್ ಸಮಯದಲ್ಲಿ ಇನ್ನೂ 230 ಹಾಸಿಗೆ ಹೆಚ್ಚು ಮಾಡಿದ್ದರ ಮಾನದಂಡಗಳ ಮೇಲೆ ಅಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಮುಂದಾಗಿದೆ. ಆದರೆ ಹರಿಹರದಲ್ಲಿ ಕಾಲೇಜು ಸ್ಥಾಪನೆ ಕಷ್ಟದ ವಿಷಯ ಎಂದು ಸಚಿವರು ಹೇಳಿದರು.

ಹರಿಹರ ನಗರದಲ್ಲಿ ಪ್ರಸ್ತುತ ಇರುವ ಆಸ್ಪತ್ರೆಯಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸೌಲಭ್ಯಗಳನ್ನು ಒದಗಿಸುವ ಕೆಲಸವನ್ನು ಮಾಡಬಹುದು. ಜಯದೇವ ಆಸ್ಪತ್ರೆಯವರ ಜೊತೆಗೆ ಮಾತನಾಡಿ ಇನ್ನೂ (2ನೇ ಪುಟಕ್ಕೆ)


## ಪ್ರಥಮ ಪುಣ್ಯಸ್ಮರಣೆ



ಶ್ರೀಮತಿ ಕೆ.ಬಿ. ಜಯ್ಯಮ್ಮನವರು

ಲಿಂಗೈಕ್ಯ : 14-07-2020

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ನೀವು ತೋರಿದ ಮಾರ್ಗದರ್ಶನ ನಮಗೆ ಸದಾ ದಾರಿದೀಪ. ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತಿ : ಶ್ರೀ ಬಿ. ಬಸವರಾಜಪ್ಪ, ನಿವೃತ್ತ ಮುಖ್ಯೋಪಾಧ್ಯಾಯರು ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಈಚಘಟ್ಟದ ಗೌಡ್ರು ವಂಶಸ್ಥರು ಹಾಗೂ ಬಂಧು-ಮಿತ್ರರು.


## ಮಲ್ಲಿಕಾರ್ಜುನ್ ದೂರದೃಷ್ಟಿಯಿಂದ ಜನಪರ ಕೆಲಸಗಳು : ಶಾಸಕ ಎಸ್ಸೆಸ್



ದಾವಣಗೆರೆ, ಜು.12- ದಾವಣಗೆರೆ ಸ್ಮಾರ್ಟ್‌ಸಿಟಿ ಯೋಜನೆಯಡಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಸ್.ಎಸ್.ಎಂ ನಗರ 'ಬಿ' ಬ್ಲಾಕ್‌ನಲ್ಲಿ ಕ್ರೀಡಾಂಗಣ, ಸರ್ಕಾರಿ ಶಾಲೆಯ ಸುಧಾರಣೆಯ ಅಭಿವೃದ್ಧಿ ಕಾಮಗಾರಿ ಹಾಗೂ ಮಾಗಾನಹಳ್ಳಿ ರಸ್ತೆಯವರೆಗೆ ಸಂಪರ್ಕ ಕಲ್ಪಿಸುವ ಸೇತುವೆ ನಿರ್ಮಾಣದ ಕಾಮಗಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ಇಂದು ಭೂಮಿ ಪೂಜೆ ನೆರವೇರಿಸಿದರು.

ಬಾಷಾನಗರದಲ್ಲಿ ನಿರ್ಮಿಸಲಾಗಿರುವ ಹೆರಿಗೆ ಆಸ್ಪತ್ರೆ ಕಟ್ಟಡ, ವೀರ ಮದಕರಿ ನಾಯಕ ವೃತ್ತದ ಬಳಿ ನಿರ್ಮಾಣಗೊಂಡಿರುವ ದುರ್ಗಾಂಬಿಕಾ ಸಮುದಾಯ ಭವನವನ್ನು ಹಿರಿಯ ಶಾಸಕ ಡಾ|| ಶಾಮನೂರು ಶಿವಶಂಕರಪ್ಪ ಅವರ ಅಧ್ಯಕ್ಷತೆಯಲ್ಲಿ (3ನೇ ಪುಟಕ್ಕೆ)

## ನಾಳೆ ಭದ್ರಾ ನೀರಾವರಿ ಸಲಹಾ ಸಮಿತಿ ಸಭೆ

ದಾವಣಗೆರೆ, ಜು.13- ಅಚ್ಚುಕಟ್ಟು ವ್ಯಾಪ್ತಿಯ ರೈತರಿಗೆ ನೀರು ಹರಿಸುವ ಸಂಬಂಧ ನೀರಾವರಿ ಸಲಹಾ ಸಮಿತಿ ಸಭೆ ನಾಡಿದ್ದು ದಿನಾಂಕ 15 ರ ಮಧ್ಯಾಹ್ನ 3 ಕ್ಕೆ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದಲ್ಲಿ ಸಭೆ ನಡೆಯಲಿದೆ.


## ಆವರಗೆರೆ ಗ್ರಾಮದ ಹಾಲುವರ್ತಿ ಗೌರಮ್ಮ ನಿಧನ



ದಾವಣಗೆರೆ ತಾಲ್ಲೂಕು ಆವರಗೆರೆ ಗ್ರಾಮದ ವಾಸಿ ದಿ|| ಅಣ್ಣಪ್ಪನವರ ಧರ್ಮಪತ್ನಿ ಶ್ರೀಮತಿ ಗೌರಮ್ಮ ಅವರು ದಿನಾಂಕ 13.07.2021ರ ಮಂಗಳವಾರ ರಾತ್ರಿ 9.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.07.2021ರ ಬುಧವಾರ ಮಧ್ಯಾಹ್ನ 12 ಕ್ಕೆ ಆವರಗೆರೆಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ
ಮೊ. : 98447 91946, 95387 77757



|| ಶಿವನಾಥ್ ರವಲನಾಥ್ ಪ್ರಸನ್ನ ||



## ನಮ್ಮ ನೂತನ ಅಂಗಡಿಯ ಉದ್ಘಾಟನಾ ಸಮಾರಂಭ

Anvekar Digital Communication

'ಅನ್ವೇಕರ್ ಡಿಜಿಟಲ್ ಕಮ್ಯೂನೀಕೇಶನ್'
ಡಿಲರ್ಸ್ ಮತ್ತು ಮೊಬೈಲ್ ಫೋನ್ ಮತ್ತು ಬಿಡಿ ಭಾಗಗಳು
ಜುಲೈ 15ರ ಗುರುವಾರ, ಸಮಯ : ಬೆಳಿಗ್ಗೆ 10.30 ಕ್ಕೆ
# 62/3 ಪಿ.ಜೆ. ಬಡಾವಣೆ, ಎವಿಕೆ ಕಾಲೇಜ್ ರಸ್ತೆ, ದಾವಣಗೆರೆ-2.
ಫೋ. : 87923 00973

ತಮ್ಮ ಸುಖಾಗಮನಾಭಿಲಾಷಿಗಳು
ಶ್ರೀಮತಿ ರಸಿಕಾ, ಶ್ರೀ ಗುರುನಾಥ ಅನ್ವೇಕರ್,
ರಾಯ್ಕರ್, ಅನ್ವೇಕರ್, ವೆರ್ಣೇಕರ್
ಕುಟುಂಬದವರು ಮತ್ತು ಸ್ನೇಹಿತರು



ನಿಮ್ಮ ವಿಶ್ವಾಸಿ :
ಅಮೂಲ್ ಜಿ.ಎ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಮಣಿಪಾಲ್ ಆರೋಗ್ಯ ಕಾರ್ಡ್**
15.07.2021ರವರೆಗೆ ವ್ಯಾಲಿಡಿಟಿ ಇರುವಂತಹ ಕಾರ್ಡ್‌ದಾರರು ರಿನೀವಲ್ ಮಾಡಿಕೊಳ್ಳಲು, ಇಂದು ಮತ್ತು ನಾಳೆ 2 ದಿನ ಮಾತ್ರ ಅವಕಾಶವಿದೆ. ಸಂಪರ್ಕಿಸಿ
**ಮಣಿಪಾಲ್ ಮಾಹಿತಿ ಕೇಂದ್ರ**
ತ್ರಿಶೂಲ್ ಟಾಕೀಸ್ ರಸ್ತೆ, ದಾವಣಗೆರೆ.
ಮೊ: 97317 09177, 89042 19373

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಮನೆಗಳು ಮಾರಾಟಕ್ಕಿವೆ**
ಕುವೆಂಪು ಬಡಾವಣೆಯಲ್ಲಿ 40x60 North 3 ಬೆಡ್‌ರೂಂ ಮನೆ, ಇಂಡಿಪೆಂಡೆಂಟ್ ಹೌಸ್, 30x40 South, ಹೊಸ ಮನೆ ಡೂಪ್ಲೆಕ್ಸ್ 3 ಬೆಡ್‌ರೂಂ ಮನೆ ಎಸ್.ಎಸ್.ಬಿ ಬ್ಲಾಕ್‌ನಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ಎಸ್.ಎಸ್. 'ಎ' ಬ್ಲಾಕ್‌ನಲ್ಲಿ ಅಥಣಿ ಕಾಲೇಜ್‌ಗೆ ಹತ್ತಿರ 30x40 ಅಕ್ಕ-ಪಕ್ಕ West, 30x40 ಪಾರ್ಕ್ ಎದುರುಗಡೆ 30x40 West, ಪಾರ್ಕ್ ಎದುರುಗಡೆ ಇದೆ. 40x56 ಕಾರ್ನರ್
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ**
House To-Let
ಸಿಂಗಲ್ ಬೆಡ್ ರೂಮ್ ಮನೆ ಬಾಡಿಗೆಗೆ ಇದೆ. ಶಿವಕುಮಾರಸ್ವಾಮಿ ಬಡಾವಣೆ, 1ನೇ ಮೇನ್, 1ನೇ ಕ್ರಾಸ್ ಸರ್.ಎಂ.ವಿ. ಕಾಲೇಜ್ ಹತ್ತಿರ, ಹದಡಿ ರಸ್ತೆ, ದಾವಣಗೆರೆ
76191 23623
94816 70519

**ಮನೆ, ಕಚೇರಿ ಜಾಗ ಬಾಡಿಗೆಗಿದೆ**
ಕೆ.ಬಿ. ಬಡಾವಣೆ 4ನೇ ಕ್ರಾಸ್‌ನಲ್ಲಿ 1BHK, 2BHK ಮುನ್ಸಿಪಲ್ ನೀರು ಬೋರ್ ನೀರು ಹಾಗೂ ಸೋಲಾರ್ ವಾಟರ್ ನೀರಿನ ಸೌಕರ್ಯವಿರುವ ಹೊಸದಾಗಿ ಕಟ್ಟಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
96863 39017
97423 10096

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
12 ತಾಸು ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.
ಸಫಾಜ್ ಸೆಕ್ಯೂರಿಟಿ ಸರ್ವೀಸ್
ಎಸ್.ಎನ್.ಎ. ಪ್ಲಾಜಾ, ಪಿ.ಬಿ. ರೋಡ್, ವಿನೋಬನಗರ, ದಾವಣಗೆರೆ.
9113053483

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ನಂದಗೋಕುಲ ಆಂಗ್ಲಮಾಧ್ಯಮ ಶಾಲೆಗೆ B.Sc. B.Ed. (PCM, CBZ) ತರಬೇತಿ ಹೊಂದಿದ ಮಹಿಳಾ ಶಿಕ್ಷಕಿಯರು ಮತ್ತು BA, B.Com, B.Sc, ಆಗಿರುವ ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ
ಮೊ. : 99640 17729

**ಬೇಕಾಗಿದ್ದಾರೆ**
ಮಾರ್ಕೆಟಿಂಗ್, ಟೆಲಿ ಕಾಲರ್‌ಗೆ ಯುವಕ-ಯುವತಿಯರು ಬೇಕಾಗಿದ್ದಾರೆ. (Basic salary 3000+Insentives)
99456 11550, 91484 00455

**ಚಿನ್ನಾಭರಣ ಖರೀದಿ**
ನಿಮ್ಮ ಗಿರಿವಿ ಇಟ್ಟಿರುವ ಒಡವೆಯನ್ನು ಬಿಡಿಸಿ, ಉಳಿದ ಹಣ ನೇರ ನಿಮ್ಮ ಕೈಯಲ್ಲಿ (ಬ್ಯಾಂಕ್, ಶಾಪ್, ಫೈನಾನ್ಸ್‌ನಲ್ಲಿ ಅಡವಿಟ್ಟಿರುವ)
99865 55080, 91484 00455

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
ಸೈಟ್ ನಂ-8, ಅಳತೆ 20x80 ಗುಜರಿ ಲೇಔಟ್ ಮಾಗಾನಹಳ್ಳಿ ಮುಖ್ಯ ರಸ್ತೆ (ಡಬಲ್ ರಸ್ತೆ) ಆಖ್ಸಾ ಮಸೀದಿ ಕಾಂಪ್ಲೆಕ್ಸ್ ಎದುರು, ಜೆಡಿಎಸ್ ಆಫೀಸ್ ಹತ್ತಿರ, ದಾವಣಗೆರೆ-1.
83106 39057

**ಬೇಕಾಗಿದ್ದಾರೆ**
1) ಕಾಲ್‌ಸೆಂಟರ್ - ಗರ್ಲ್
2) ಡೆಲಿವರಿ - ಬಾಯ್ಸ್ (ಸೈಕಲ್ ಇದ್ದವರಿಗೆ ಆದ್ಯತೆ)
3) ಸೇಲ್ಸ್ ಬಾಯ್ಸ್ - ಕಾಂಟ್ರಾಕ್ಟ್
ಶ್ರೀ ಕುರುವತ್ತಿ ಬಸವೇಶ್ವರ ಫಾರ್ಮಾ
1ನೇ ಮಹಡಿ, ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ಡಾ|| ಆಲೂರು ಮಂಜುನಾಥ್ ಹಾಸ್ಪಿಟಲ್ ಪಕ್ಕ, ದಾವಣಗೆರೆ. ಮೊ. : 95132 22192

**ಡ್ರೈವರ್ ಬೇಕಾಗಿದ್ದಾರೆ**
ಸಂಕೇಶ್ವರ ಇಂಡಸ್ಟ್ರೀಸ್ ಕರೂರು ರಸ್ತೆ ಇಲ್ಲಿ ಅಶೋಕ ಲೈಲ್ಯಾಂಡ್ Dost Plus ಓಡಿಸಲು ಡಿ.ಎಲ್ ಹಾಗೂ ಬ್ಯಾಡ್ಜ್ ಹೊಂದಿರುವವರಿಗೆ ಮಾತ್ರ ಆದ್ಯತೆ. ಸಂಬಳ 12000 ದಿಂದ 14000
ಸಂಪರ್ಕಿಸಿ
81055 94402
96632 48117

**ಬೇಕಾಗಿದ್ದಾರೆ**
ITI Diploma (Mechanical), Service Advisor, Floor in charge (Male)
84315 26167
95382 95776

**Required**
Sales Executive & Delivery Boy (Own Vehicle compulsory )
Ph No : 9844493755

**ಪ್ರವೇಶ ಪ್ರಕಟಣೆ 2020-21**
SSLC/PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ನೇರ ಪರೀಕ್ಷೆಗಳು**
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


## ರಾಯಣ್ಣನ ಹೆಸರು

**(1ನೇ ಪುಟದಿಂದ)** ರಿಶ್ಯಂತ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ದೂಡಾ ಆಯುಕ್ತ ಬಿ.ಟಿ. ಕುಮಾರಸ್ವಾಮಿ, ದೂಡಾ ಸದಸ್ಯರಾದ ಡಿ.ವಿ. ಜಯರುದ್ರಪ್ಪ, ಆರ್.ಎಲ್. ದೇವೀರಮ್ಮ, ಸೌಭಾಗ್ಯ ಮುಕುಂದ, ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಪಾಲಿಕೆ ಸದಸ್ಯರುಗಳಾದ ಪ್ರಸನ್ನ ಕುಮಾರ್, ಸುಧಾ ಇಟ್ಟಿಗುಡಿ ಮಂಜುನಾಥ್, ಆಶಾ ಉಮೇಶ್, ಗೋಣೆಪ್ಪ, ಕೆ.ಚಮನ್‌ಸಾಬ್, ಉರ್ ಬಾನು (ಪಂಡಿತ್), ಮುಖಂಡರಾದ ಅಯೂಬ್ ಪೈಲ್ವಾನ್ ಮತ್ತಿತರರು ಉಪಸ್ಥಿತರಿದ್ದರು.


**ಜಮೀನು ಬೇಕಾಗಿದೆ**
ದಾವಣಗೆರೆ ಹತ್ತಿರ ಹದಡಿ ವ್ಯಾಪ್ತಿಯಲ್ಲಿ ರಸ್ತೆಗೆ ಹೊಂದಿಕೊಂಡಂತಹ ತೋಟ ಅಥವಾ ಜಮೀನು ಕೊಳ್ಳಲು ಬೇಕಾಗಿದೆ.
63616 62669

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್‌ಮನ್ ಮತ್ತು ಸೇಲ್ಸ್ ಗರ್ಲ್ಸ್ ಹಾಗೂ ಕ್ಲೀನಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ
87622 21697

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ : ಬೆಳಿಗ್ಗೆ 9.00 ರಿಂದ ಸಂಜೆ 8.00 ರವರೆಗೆ
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಷಿಯಲ್ಸ್
ಲಾಯರ್ ರಸ್ತೆ, ಟಯರ್ ಅಂಗಡಿಗಳ ಹತ್ತಿರ, ದಾವಣಗೆರೆ.

**ADMS OPENED**
Veta-Experts in spoken English
93439 44659
99028 60360

**House for Rent or lease**
Lokikere Road, Near TV Station, Subramanaya swamy Temple, 1st Floor For Rent Furnished, 2BHK, car Parking, Lift (North Facing, Vastu Compliance) Near by to SS Hospital, lalith School, Sir MV College, Zilla Panchayat, Rent 10,500, Lease 12 Lakhs
Mo: 99865 38099

**ಸೈಟ್ ಮಾರಾಟಕ್ಕಿದೆ**
ದಾವಣಗೆರೆಯ KHBಯಲ್ಲಿ ಪೂರ್ವ ದಿಕ್ಕಿನ 30x50 ಸೈಟ್ ಮಹಾನಗರ ಪಾಲಿಕೆಯಲ್ಲಿ ಎಂಟ್ರಿಯಾಗಿರುತ್ತದೆ.
9448874011

**ಬೇಕಾಗಿದ್ದಾರೆ**
ಮಹಿಳಾ ಟೆಲಿಕಾಲರ್ಸ್ (Telecallers) ಬೇಕಾಗಿದ್ದಾರೆ.
74836 01989
85537 08107

**ಬೇಕಾಗಿದ್ದಾರೆ**
ವಿದ್ಯಾನಗರ 2ನೇ ಬಸ್ ಸ್ಟಾಪ್ ಹತ್ತಿರ ಮನೆ ಗಾರ್ಡನ್ ಕೆಲಸ ಮಾಡಲು ಮತ್ತು BIET ಕಾಲೇಜ್ ರಸ್ತೆಯ ಬಿಲ್ಡಿಂಗ್ ಮೇಲ್ವಿಚಾರಣೆ ನೋಡಿಕೊಳ್ಳಲು ಕೆಲಸಗಾರರು ಬೇಕಾಗಿದ್ದಾರೆ.
94810 38402, 99162 36521

**JOBS**
MCS ACADEMY
Training & Placement Cell
98444 92888

**REQUIRED**
ITI Electrical
Sales Executives
Walk In Interview
KRISVA
ನಂ. 84/2, ಮಹಾಲಕ್ಷ್ಮಿ ಪ್ಲಾಜಾ, ಅರುಣ ಚಿತ್ರಮಂದಿರ ಹತ್ತಿರ, ಪಿ.ಬಿ. ರೋಡ್, ದಾವಣಗೆರೆ - 577 002.
ಫೋ : 63666 35555, 98800 15555


# ಮುಂಬರುವ ದಿನಗಳಲ್ಲಿ ಬಿಜೆಪಿಗೆ ಮತ್ತಷ್ಟು ಬಲ



## ಮಾಜಿ ಶಾಸಕ ಬಿ.ಪಿ. ಹರೀಶ್ ವಿಶ್ವಾಸ

ಮಲೇಬೆನ್ನೂರು, ಜು.13- ಬಿಜೆಪಿ ಸರ್ಕಾರದ ಸಾಧನೆಗಳು ಮತ್ತು ಕೊರೊನಾ ನಿಯಂತ್ರಣ ಹಾಗೂ ಕೊರೊನಾದಿಂದ ಸಂಕಷ್ಟಕ್ಕೊಳಗಾದವರಿಗೆ ಸರ್ಕಾರ ನೀಡಿದ ನೆರವು ಎಲ್ಲಾ ಜನರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಮಾಜಿ ಶಾಸಕ ಬಿ.ಪಿ. ಹರೀಶ್ ಹೇಳಿದರು.

ದೇವರಬೆಳಕೆರೆ ಗ್ರಾ.ಪಂ. ಸದಸ್ಯರು ಮತ್ತು ಪಿಎಸಿಎಸ್‌ನ ನಿರ್ದೇಶಕರು ಜೆಡಿಎಸ್ ತೊರೆದು ಬಿಜೆಪಿಗೆ ಸೇರ್ಪಡೆಯಾದ ಸಂದರ್ಭದಲ್ಲಿ ಅವರು ಮಾತನಾಡಿದರು.

ಮುಂಬರುವ ಎಲ್ಲಾ ಚುನಾವಣೆಗಳಲ್ಲೂ ಜನ ಬಿಜೆಪಿ ಬೆಂಬಲಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಹರೀಶ್ ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಮಾತನಾಡಿ, ಬರುವ ಜಿ.ಪಂ., ತಾ.ಪಂ. ಚುನಾವಣೆಗೆ ಪಕ್ಷದ ಕಾರ್ಯಕರ್ತರು ಸನ್ನದ್ಧರಾಗಬೇಕು. ನಮ್ಮ ಅಭ್ಯರ್ಥಿಗಳಿಗೆ ಸರ್ಕಾರದ ಸಾಧನೆಗಳೇ ಶ್ರೀರಕ್ಷೆ ಆಗಲಿದೆ ಎಂದು ಕರೆ ನೀಡಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಜುಲೈ 24 ರಂದು ಗೃಹ ಸಚಿವ ಬಸವರಾಜ್ ಬೊಮ್ಮಾಯಿ, ಜಿಲ್ಲಾ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ.ಸಿದ್ದೇಶ್ವರ ಅವರುಗಳ ಸಮ್ಮುಖದಲ್ಲಿ ಹಲವರು ಬಿಜೆಪಿ ಸೇರಲಿದ್ದಾರೆ ಎಂದು ತಿಳಿಸಿದರು.

ಜಿ.ಪಂ. ಮಾಜಿ ಉಪಾಧ್ಯಕ್ಷ ಟಿ. ಮುಕುಂದ್, ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜು, ಹರಿಹರ ನಗರ ಬಿಜೆಪಿ ಅಧ್ಯಕ್ಷ ಅಜಿತ್ ಸಾವಂತ್, ಬಿಜೆಪಿ ಮುಖಂಡರಾದ ಬಿ.ರಾಮಚಂದ್ರಪ್ಪ, ಹಲಸಬಾಳು ಶಿವಾನಂದಪ್ಪ, ತಾ. ಬಿಜೆಪಿ ಪ್ರಧಾನ ಕಾರ್ಯದರ್ಶಿ ಆದಾಪುರ ವೀರೇಶ್, ಬೆಳ್ಳೂಡಿ ಬಕ್ಕೇಶ್, ವಕೀಲ ಆನಂದ್, ನಗರಸಭೆ ಸದಸ್ಯರಾದ ರಜನಿಕಾಂತ್, ರಾಘವೇಂದ್ರ ಉಪಾಧ್ಯ ಇನ್ನಿತರರು ಹಾಜರಿದ್ದರು.

ಇದೇ ಸಂದರ್ಭದಲ್ಲಿ ದೀಟೂರು ಗ್ರಾಮದ ಯುವ ಮುಖಂಡ ನಿರಂಜನ್ ಜೆಡಿಎಸ್ ತೊರೆದು ಬಿಜೆಪಿಗೆ ಸೇರ್ಪಡೆಯಾದರು.

# ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಯಿಂದ ಶೈಕ್ಷಣಿಕ ಅಭಿವೃದ್ಧಿ



ಹರಿಹರ, ಜು.13- ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ ಹರಿಹರ ನಗರದಲ್ಲೇ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡಿದರೆ ಈ ಭಾಗದ ಜನರು ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಿದೆ ಎಂದು ಕಾಂಗ್ರೆಸ್ ಜಿಲ್ಲಾ ಮಾಧ್ಯಮ ವಕ್ತಾರರೂ, ವಕೀಲರೂ ಆದ ಎಂ. ನಾಗೇಂದ್ರಪ್ಪ ಅಭಿಪ್ರಾಯಪಟ್ಟಿದ್ದಾರೆ.

ನಗರದ ಗಾಂಧಿ ವೃತ್ತದಲ್ಲಿ ನಾಗರಿಕ ಹೋರಾಟ ಸಮಿತಿ ವತಿಯಿಂದ ಸರ್ಕಾರಿ ವೈದ್ಯಕೀಯ ಕಾಲೇಜನ್ನು ನಗರದಲ್ಲೇ ಸ್ಥಾಪಿಸುವಂತೆ ಆಗ್ರಹಿಸಿ ತಹಶೀಲ್ದಾರ್ ಅವರಿಗೆ ನಿನ್ನೆ ಮನವಿ ಸಲ್ಲಿಸುವ ಸಂದರ್ಭದಲ್ಲಿ ಅವರು ಮಾತನಾಡಿದರು.

ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕವಾಗಿ ತನ್ನದೇ ಆದ ಛಾಪು ಮೂಡಿಸಿ, ಅಭಿವೃದ್ಧಿ ಪಥದತ್ತ ಸಾಗುತ್ತಿರುವ ನಗರದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ. ನಗರದ ಆರ್ಥಿಕತೆಗೆ ಉತ್ತೇಜನ ನೀಡುವ ಜೊತೆಗೆ ಹರಿಹರ-ದಾವಣಗೆರೆ ಅವಳಿ ನಗರಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ ಮಾತನಾಡಿ, ನಗರದಲ್ಲೇ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಕುರಿತಂತೆ ಈಗಾಗಲೇ ಕಾರ್ಯನಿರತ ಪತ್ರಕರ್ತರ ಸಂಘದಿಂದ ಸಹಿ ಸಂಗ್ರಹ ಅಭಿಯಾನಕ್ಕೆ ಬೆಂಬಲ ನೀಡಲಾಗಿದೆ. ಹಾಲಿ, ಮಾಜಿ ಶಾಸಕರು ವಿವಿಧ ಸಮಾಜಗಳ ಮಠಾಧೀಶರು, ವಿವಿಧ ಸಂಘ-ಸಂಸ್ಥೆಗಳ ಸಹಮತ ಕೂಡ ಇದೆ ಎಂದು ಹೇಳಿದರು.

# ಹರಪನಹಳ್ಳಿ : ಸಣ್ಣ ಪ್ರಕರಣಗಳನ್ನು ಲೋಕ ಅದಾಲತ್‌ನಲ್ಲಿ ಇತ್ಯರ್ಥ ಪಡಿಸಿಕೊಳ್ಳಬೇಕು



## ನ್ಯಾ. ಎಂ. ಭಾರತಿ

ಹರಪನಹಳ್ಳಿ, ಜು.13- ರಾಷ್ಟ್ರೀಯ ಲೋಕ ಅದಾಲತ್ ಬರುವ ಆಗಸ್ಟ್ 14 ರಂದು ನಡೆಯಲಿದ್ದು, ನ್ಯಾಯಾಲಯದ ವ್ಯಾಪ್ತಿಯಲ್ಲಿ ದಾಖಲಾಗಿರುವ ಸಣ್ಣ ಪುಟ್ಟ ವ್ಯಾಜ್ಯ ಪ್ರಕರಣಗಳನ್ನು ಕಕ್ಷಿದಾರರು ನ್ಯಾಯಾವಾದಿಗಳ ಸಮ್ಮುಖದಲ್ಲಾಗಲೀ ಅಥವಾ ನೇರವಾಗಿ ಉಭಯ ನ್ಯಾಯಾಲಯಕ್ಕೆ ಹಾಜರಾಗಿ ನಿಮ್ಮ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದು ಎಂದು ಇಲ್ಲಿನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ.ಭಾರತಿ ಹೇಳಿದರು.

ಪಟ್ಟಣದ ಜೆ.ಎಂ.ಎಫ್.ಸಿ. ನ್ಯಾಯಾಲಯದ ಆವರಣದಲ್ಲಿ ಇಂದು ಜರುಗಿದ ಸುದ್ದಿ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಷ್ಟ್ರೀಯ ಲೋಕ ಅದಾಲತ್ ವ್ಯಾಪ್ತಿಯಲ್ಲಿ ಬರುವ ಚೆಕ್ಕು ಅಮಾನ್ಯ ಪ್ರಕರಣ, ಬ್ಯಾಂಕ್ ವಸೂಲಾತಿ, ಮೋಟಾರು ಅಪಘಾತ, ಭೂ ಸ್ವಾಧೀನ, ಸಿವಿಲ್, ಹಾಗೂ ಕ್ರಿಮಿನಲ್ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿಕೊಳ್ಳಿ ಎಂದು ಅವರು ಕಕ್ಷಿದಾರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಕಿರಿಯ ಸಿವಿಲ್ ನ್ಯಾಯಾಧೀಶರಾದ ಪಕ್ಕೀರವ್ವ ಕೆಳಮನೆ, ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರೇಗೌಡ್ರು, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ್ರು, ಸರ್ಕಾರಿ ಅಭಿಯೋಜಕರುಗಳಾದ ಮೀನಾಕ್ಷಿ, ನಿರ್ಮಲ, ವಕೀಲರುಗಳಾದ ಚಂದ್ರಮೌಳಿ, ಎಂ. ಮೃತ್ಯುಂಜಯ, ಬಿ. ಸಿದ್ದೇಶ್, ಮುತ್ತಿಗಿ ರೇವಣ್ಣ, ಮುಜುಬರ್, ಗಿರೀಶ್, ಹುಲಿಯಪ್ಪ ಕೊಟ್ರೇಶ್, ಮಂಜುನಾಥ್, ಗುಡದಯ್ಯ, ತಿಪ್ಪೇಶ್ ಇನ್ನಿತರರಿದ್ದರು.

# ಹರಿಹರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಅಸಾಧ್ಯ



**(1ನೇ ಪುಟದಿಂದ)** 50 ಬೆಡ್ ಆಸ್ಪತ್ರೆ ತೆರೆಯುವುದಕ್ಕೆ ವ್ಯವಸ್ಥೆ ಮಾಡಬಹುದು ಎಂದು ಅವರು ತಿಳಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಒಂದು ಸುಸಜ್ಜಿತ ವೈದ್ಯಕೀಯ ಕಾಲೇಜು ಸ್ಥಾಪನೆಯಾಗ ಬೇಕಾದರೆ ಅನೇಕ ಮಾನದಂಡಗಳಿರುತ್ತವೆ. 1200 ಬೆಡ್ ಆಸ್ಪತ್ರೆ ಇರಬೇಕು. ಹಲವಾರು ರೀತಿಯಲ್ಲಿ ವೈದ್ಯಕೀಯ ವ್ಯವಸ್ಥೆಗಳಿರಬೇಕು. ಹರಿಹರ ನಗರದಲ್ಲಿ 100 ಬೆಡ್ ಆಸ್ಪತ್ರೆ ಮತ್ತು 20 ಎಕರೆ ಜಮೀನು ಇಟ್ಟುಕೊಂಡು ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡಿ ಎಂದು ಕೇಳಿದರೆ ಸಾಧ್ಯವಾಗದು ಎಂದು ಅಭಿಪ್ರಾಯಪಟ್ಟರು.

ದಾವಣಗೆರೆ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯಲ್ಲಿ 930 ಹಾಸಿಗೆ ಇದ್ದದ್ದನ್ನು 1200 ಬೆಡ್‌ಗೆ ಏರಿಸಲಾಗಿದೆ. ಹಾಗೂ ನಗರದ ಜನತೆ 8-10 ವರ್ಷಗಳಿಂದ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಒತ್ತಾಯ ಮಾಡುತ್ತಿದ್ದಾರೆ. ಸಂವಿಧಾನದ ಪತ್ರದಲ್ಲಿ ಏನು ಬರೆದಿರುತ್ತದೋ ಅದನ್ನು ಮೀರಿ ಏನು ಮಾಡಲು ಸಾಧ್ಯವಿಲ್ಲ ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಕಾಗಿನಲೆ ಕನಕ ಗುರುಪೀಠದ ಶ್ರೀ ಜಗದ್ಗುರು ಶ್ರೀ ನಿರಂಜನನಾಂದಪುರಿ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿ, ದಾವಣಗೆರೆ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ರಾಜ್ಯ ಸರ್ಕಾರಕ್ಕೆ ಒತ್ತಾಯಿಸುವ ಸಲುವಾಗಿ ಮಾಡಿದ ಮನವಿ ಮೇರೆಗೆ ಇಲ್ಲಿ ಸಭೆ ನಡೆಸಲಾಗುತ್ತಿದೆ. ಕಾಲೇಜು ಸ್ಥಾಪನೆ ಬಗೆಗಿನ ತೊಂದರೆ-ತೊಡಕುಗಳು ಬಾರದಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಗುತ್ತಿದೆ ಎಂದು ಹೇಳಿದರು.

ವರ್ತಕ ಶಿವಪ್ರಕಾಶ್ ಶಾಸ್ತ್ರಿ, ಹರಿಹರದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಅನೇಕ ರೀತಿಯ ಮೂಲಭೂತ ಸೌಕರ್ಯಗಳು ಇರುವುದರಿಂದ ಇಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಸರ್ಕಾರ ಮುಂದಾಗಬೇಕು ಎಂದು ತಿಳಿಸಿದರು.

ಮಾಜಿ ನಗರಸಭೆ ಸದಸ್ಯ ನಾಗರಾಜ್ ಮೆಹರ್ವಾಡೆ, ನಗರದಲ್ಲಿ ಬೇಸಿಗೆ ಸಮಯ ಬಂದರೆ ಸಾರ್ವಜನಿಕರು ಕುಡಿಯುವ ನೀರಿಗೆ ಪರದಾಡುತ್ತಾರೆ. ಆಗಾಗಿ ಅಗಸನಕಟ್ಟೆ ಕೆರೆ ಅಭಿವೃದ್ಧಿ ಪಡಿಸಿ ಎಂದು ಹೇಳಿದರು.

ದೂಡಾ ಅಧ್ಯಕ್ಷ ಶಿವಕುಮಾರ್ ರಾಜನಹಳ್ಳಿ ಮಾತನಾಡಿ, ಅಗಸನಕಟ್ಟೆ ಕೆರೆ ಸ್ಥಳವು 25 ಎಕರೆ ಪ್ರದೇಶದಲ್ಲಿ 20 ಎಕರೆ ಪ್ರದೇಶವನ್ನು ಉಳ್ಳವರು ಆಕ್ರಮಿಸಿಕೊಂಡಿದ್ದಾರೆ ಇದನ್ನು ತೆರವುಗೊಳಿಸಿ ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು.

ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಮಹಾಸ್ವಾಮೀಜಿ, ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ನಂದಿಗುಡಿ ಮಠದ ವೃಷಭಪುರಿ ಸ್ವಾಮೀಜಿ, ವೇಮನಪೀಠದ ವೇಮನಾನಂದ ಸ್ವಾಮೀಜಿ, ಮುಸ್ಲಿಂ ಧರ್ಮದ ಶಂಶುದ್ದೀನ್ ಸಾಬ್ ಬರ್ಕಾತಿ, ಕ್ರೈಸ್ತ ಧರ್ಮದ ಫಾದರ್ ಅಂತೋಣಿ, ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಶಾಸಕ ಬಿ.ಪಿ. ಹರೀಶ್, ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಡಿವೈಎಸ್ಪಿ ನರಸಿಂಹರಾಜು, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಗ್ರಾಮಾಂತರ ಪಿಎಸ್‌ಐ ಡಿ. ರವಿಕುಮಾರ್ ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ, ನಾಗರಿಕ ಹೋರಾಟ ಸಮಿತಿಯ ಎನ್ ಹೆಚ್. ಶ್ರೀನಿವಾಸ್ ನಂದಿಗಾವಿ, ಎಂ. ನಾಗೇಂದ್ರಪ್ಪ, ಬಿ.ಕೆ. ಸೈಯದ್ ರೆಹಮಾನ್, ಹೆಚ್.ಕೆ. ಕೊಟ್ರಪ್ಪ, ಹೆಚ್ ನಿಜಗುಣ, ಬೆಳ್ಳೂಡಿ ರಾಮಚಂದ್ರಪ್ಪ, ಟಿ.ಜೆ. ಮುರುಗೇಶಪ್ಪ, ಸಿ.ಎನ್. ಹುಲುಗೇಶ್, ಕಸಾಪ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ, ನಾಗರಾಜ್ ಮೆಹರ್ವಾಡೆ, ಮಾಜಿ ನಗರಸಭೆ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ಶಿಕ್ಷಕ ಬೀರಪ್ಪ, ಜಗದೀಶ್ ಚೂರಿ, ಪತ್ರಕರ್ತರಾದ ಟಿ. ಇನಾಯತ್, ಎಂ.ಚಿದಾನಂದ ಕಂಚಿಕೇರಿ ಶೇಖರಗೌಡ, ಹೆಚ್.ಸಿ. ಕೀರ್ತಿಕುಮಾರ್, ಕೆ. ಜೈಮುನಿ, ಆರ್. ಮಂಜುನಾಥ್, ಆರ್.ಬಿ. ಪ್ರವೀಣ್, ಪಿ.ಜೆ. ಮಹಾಂತೇಶ್, ಮರಿಯೋಜಿರಾವ್, ಚಂದ್ರಶೇಖರ್, ನಿರಂಜನ್, ಕರಿಬಸಪ್ಪ ಹಾಗೂ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ನಾಲೆಯಲ್ಲಿ ಮಹಿಳೆಯ ಮೃತದೇಹ ಪತ್ತೆ

ದಾವಣಗೆರೆ, ಜು.13- ಬಸವಾಪಟ್ಟಣ ಠಾಣಾ ವ್ಯಾಪ್ತಿಯ ಸೂಳೆಕೆರೆ ಸಿದ್ದನ ನಾಲೆಯಲ್ಲಿ ಅಪರಿಚಿತ ಮಹಿಳೆಯೋರ್ವಳ ಮೃತದೇಹ ಪತ್ತೆಯಾಗಿದ್ದು, ದುಷ್ಕರ್ಮಿಗಳು ಕೊಲೆ ಮಾಡಿರುವ ಶಂಕಿಸಲಾಗಿದೆ.

ಮೃತದೇಹ ಗುರುತು ಪತ್ತೆ ಸಾಧ್ಯವಾಗದಷ್ಟು ಮುಖ ಜಜ್ಜಿರುವುದರಿಂದ ಮಹಿಳೆಯ ಗುರುತು ಪತ್ತೆಯಾಗಿಲ್ಲ. ಮಹಿಳೆ ಸುಮಾರು 25 ವರ್ಷಕ್ಕೂ ಮೇಲ್ಪಟ್ಟಿದ್ದು, ತೆಳು, ಬಿಳಿ ಬಣ್ಣದ ಮೈಕಟ್ಟಿದೆ. ಎಡಗೈ ಮಧ್ಯದ ಬೆರಳಿಗೆ ಉಂಗುರ ಹಾಕಿರುವ ಗುರುತು ಕಂಡುಬಂದಿದ್ದು, ಸೊಂಟಕ್ಕೆ ತಿಳಿಗೆಂಪು ಒಳಲಂಗ ಹಾಕಿದ್ದು ಅದಕ್ಕೆ ನೀಲಿದಾರ (ಲಾಡಿ) ಯಿಂದ ಕಟ್ಟಲ್ಪಟ್ಟಿದೆ.

ಸಂಬಂಧಪಟ್ಟವರು ಬಸವಾಪಟ್ಟಣ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದು.

# ನಗರದ ವಿವಿಧ ಭಾಗಗಳಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹಗೇದಿಬ್ಬ ಸರ್ಕಲ್, ಗಾಂಧಿನಗರ ಅಂಬೇಡ್ಕರ್ ಸರ್ಕಲ್, ಮಹಾರಾಜ ಪೇಟೆ, ಬಸವರಾಜ ಪೇಟೆ, ಚೌಕಿ ಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾದೇವಿ ರಸ್ತೆ, ಎಸ್‌ಕೆಪಿ ರಸ್ತೆ, ಹಳೇಪೇಟೆ ವೀರಭದ್ರೇಶ್ವರ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕೆ.ವಿ. ಮುದೇನೂರು, ಕೆ.ವಿ. ಕುಪ್ಪೇಲೂರು, ಕೆ.ವಿ. ಹಲಗೇರಿ, ಕೆ.ವಿ. ಸುಣಕಲ್ಲಬಿದರಿ ವಿದ್ಯುತ್ ಮಾರ್ಗಗಳಲ್ಲಿ ಬರುವ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.


**ಕೈಲಾಸ ಸಮಾರಾಧನೆ ಆಹ್ವಾನ**
ದಾವಣಗೆರೆ ಸಿಟಿ 43ನೇ ವಾರ್ಡ್ ಶಾಮನೂರು ಗ್ರಾಮದ ದಿ|| ಓಬಜ್ಜಿ ಸಣ್ಣಹನುಮಂತಪ್ಪ ಇವರ ಧರ್ಮಪತ್ನಿ
ಶ್ರೀಮತಿ ಸೀತಮ್ಮ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 02.07.2021ರ ಶುಕ್ರವಾರ ನನ್ನ ಪೂಜ್ಯ ಪತಿಯವರಾದ



ಜನನ : 05-04-1942
ಮರಣ : 02-07-2021
**ಶ್ರೀ ಓಬಜ್ಜಿ ಸಣ್ಣಹನುಮಂತಪ್ಪ (ಓಂ ಶಾಂತಿ)**
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 14.07.2021ರ ಬುಧವಾರ ಬೆಳಿಗ್ಗೆ 10.30 ಗಂಟೆಗೆ ಶಾಮನೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
✦ ಶ್ರೀಮತಿ ಸೀತಮ್ಮ ದಿ|| ಓಬಜ್ಜಿ ಹನುಮಂತಪ್ಪ
✦ ಶ್ರೀಮತಿ ಮಂಜಮ್ಮ, ಓಬಜ್ಜಿ ಹೆಚ್. ಶೇಖರಪ್ಪ ಮತ್ತು ಮಕ್ಕಳು
✦ ಶ್ರೀಮತಿ ಮಂಗಳಮ್ಮ, ಓ.ಹೆಚ್. ರಮೇಶ್ ಮತ್ತು ಮಕ್ಕಳು
✦ ಶ್ರೀಮತಿ ಮಲ್ಲಮ್ಮ, ಓ.ಹೆಚ್. ಲಕ್ಷ್ಮಣ ಮತ್ತು ಮಕ್ಕಳು
✦ ಶ್ರೀಮತಿ ಸಿದ್ದಮ್ಮ, ದಿ|| ಮಂಜಪ್ಪ, ಲಿಂಗದಹಳ್ಳಿ ಮತ್ತು ಮಕ್ಕಳು
✦ ಶ್ರೀಮತಿ ಹಾಲಮ್ಮ, ಜಗದೀಶ ಕಂಚಿಕೇರಿ ಮತ್ತು ಮಕ್ಕಳು
✦ ಶ್ರೀಮತಿ ಹೊನ್ನಮ್ಮ ಮತ್ತು ಮಕ್ಕಳು
✦ ಶ್ರೀಮತಿ ಓಬಜ್ಜಿ ಮಾತಂಗ್ಯೆಮ್ಮ ದಿ|| ರೇವಣಸಿದ್ದಪ್ಪ ಮತ್ತು ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು
✦ ಶ್ರೀಮತಿ ನೇತ್ರಾವತಿ, ನಾಗರಾಜಪ್ಪ ಕಂಚಿಕೆರೆ ಮತ್ತು ಮಕ್ಕಳು
✦ ಶ್ರೀಮತಿ ಗೀತಮ್ಮ, ದುರುಗಪ್ಪ ಅರಸೀಕೆರೆ ಮತ್ತು ಮಕ್ಕಳು
✦ ಓಬಜ್ಜಿ ಕೆಂಚಪ್ಪ ಹಾಗೂ ಓಬಜ್ಜಿ ವಂಶಸ್ಥರು
ಶಾಮನೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

**ಆವರಗೆರೆ ಹಾಲುವರ್ತಿ ಪ್ರಭುಲಿಂಗಪ್ಪ ನಿಧನ**



ದಾವಣಗೆರೆ ತಾಲ್ಲೂಕು ಆವರಗೆರೆ ಗ್ರಾಮದ ವಾಸಿ
**ಹಾಲುವರ್ತಿ ಪ್ರಭುಲಿಂಗಪ್ಪ**
ಇವರು ದಿನಾಂಕ 13.07.2021 ರ ಮಂಗಳವಾರ ಬೆಳಿಗ್ಗೆ 7.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.07.2021ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಆವರಗೆರೆ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.
ದುಃಖತಪ್ತ ಕುಟುಂಬ ವರ್ಗ: 98446 43448, 94811 59143

**ಐದನೇ ವರ್ಷದ ಪುಣ್ಯಸ್ಮರಣೆ**



**ಶ್ರೀ ಗೌಡ್ರು ರುದ್ರಪ್ಪನವರು** (ನಿಧನ : 14.07.2016)
ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ..
ಅಣ್ಣ : ಪಾಟೀಲ್ ಅಜ್ಜಪ್ಪ ಮತ್ತು ಸಹೋದರರು,
ಪತ್ನಿಯರು : ದಿ|| ಯಶೋಧಮ್ಮ, ಶ್ರೀಮತಿ ಶಕುಂತಲ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಪುಟಾಣಿಗಳಾದ : ಪ್ರಜ್ಞಾ, ಪ್ರಥಮ್‌ಗೌಡ, ಚಿನ್ಮಯ್, ಪಲ್ಲವಿ, ಶ್ರಾವ್ಯ, ಕಲ್ಲೇಶ್, ಪುನೀತ್, ಸಿಂಧು, ಶರತ್ ಹಾಗೂ ಗೌಡ್ರ ವಂಶಸ್ಥರು, ಶಿರಮಗೊಂಡನಹಳ್ಳಿ ಗ್ರಾಮಸ್ಥರು, ಫೋ. : 95353 73240


## ಹಲಗಿಲವಾಡದ ಗುರುಬಸಪ್ಪ ಪಾಟೀಲ್ ನಿಧನ



ಹರಪನಹಳ್ಳಿ ತಾಲ್ಲೂಕು ಹಲಗಿಲವಾಡ ಗ್ರಾಮದ ವಾಸಿ ಗುರುಬಸಪ್ಪ ಪಾಟೀಲ್ (68) ಇವರು ದಿನಾಂಕ 12.07.2021ರ ಸೋಮವಾರ ರಾತ್ರಿ 7.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.07.2021ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ಹರಪನಹಳ್ಳಿ ತಾಲ್ಲೂಕು ಹಲಗಿಲವಾಡದಲ್ಲಿ ನೆರವೇರಲಿದೆ.

# ಮಾಗಿ ಕುಟುಂಬದಿಂದ ಧರ್ಮಸ್ಥಳಕ್ಕೆ ಒಂದು ಲೋಡ್ ಅಕ್ಕಿ ಸಮರ್ಪಣೆ



ದಾವಣಗೆರೆ, ಜು.13- ನಗರದ ದಿ|| ಶ್ರೀಮತಿ ಬಸಮ್ಮ ಮತ್ತು ಶ್ರೀ ವೀರಬಸಪ್ಪ ಮಾಗಿ ಕುಟುಂಬದ ವತಿಯಿಂದ ಧರ್ಮಸ್ಥಳದ ಮಂಜುನಾಥನ ಸನ್ನಿಧಿಗೆ ಒಂದು ಲೋಡ್ ಅಕ್ಕಿಯನ್ನು ಅಕ್ಕಿ ವ್ಯಾಪಾರಿಯೂ ಆಗಿರುವ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಕಾರ್ಯದರ್ಶಿ ಜಯಪ್ರಕಾಶ್ ಮಾಗಿ ಅವರು ನಗರದ ಹಳೇಪೇಟೆಯ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಇಂದು ವಿಶೇಷ ಪೂಜೆ ಸಲ್ಲಿಸಿ, ಭಕ್ತಿ ಸಮರ್ಪಿಸಲು ಧರ್ಮಸ್ಥಳಕ್ಕೆ ತೆರಳಿದರು.

ಅಕ್ಕಿ ಲೋಡಾದ ಲಾರಿಗೆ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಅಧ್ಯಕ್ಷ ದೇವರಮನಿ ಶಿವಕುಮಾರ್ ಚಾಲನೆ ನೀಡಿದರು.

ಈ ಸಂದರ್ಭ ದಲ್ಲಿ ಪಾಲಿಕೆ ಸದಸ್ಯ ಶಿವನಗೌಡ ಟಿ.ಪಾಟೀಲ, ಟಿಂಕರ್ ಮಂಜಣ್ಣ, ಅಭಿಷೇಕ್ ಗಾಂಜಿ, ಬಿ.ಪಿ. ಎಂ. ಜಗದೀಶ್, ಸತೀಶ್ ಹುಬ್ಬಳ್ಳಿ, ಅಣ್ಣಪ್ಪ ಸ್ವಾಮಿ, ಮಂಜು ನಾಥ್, ಸಂಗಮೇಶ್ ಗದಗ, ಮಾಗಿ ಕುಮಾರ್, ಟಿಎಸ್ ಎಂ, ಮಲ್ಲಿಕಾರ್ಜುನ್, ಬಸವಲಿಂಗ, ಜಯರಾಜ್ ಮೇಟಿ, ಸುರೇಶ್, ನಿಖಿಲ್ ಮಾಗಿ, ವಿನಾಯಕ ಬ್ಯಾಡಗಿ, ಗಣೇಶ್, ಹರ್ಷ ಮಾಗಿ, ಪಿ.ಎಸ್.ಪರಶುರಾಮ್, ಹಲುವಾಗಲು ಶಿವಣ್ಣ ಮತ್ತಿತರರಿದ್ದರು.

# ಪದವಿ ಶಿಕ್ಷಣ ನಾಲ್ಕು ವರ್ಷಕ್ಕೆ ಏರಿಕೆ ಖಂಡಿಸಿ ಪ್ರತಿಭಟನೆ

ದಾವಣಗೆರೆ, ಜು.13- ಎನ್‌ಇಪಿ ಅನುಷ್ಠಾನದ ಭಾಗವಾಗಿ ಪದವಿ ಶಿಕ್ಷಣವನ್ನು ಮೂರು ವರ್ಷದಿಂದ ನಾಲ್ಕು ವರ್ಷಕ್ಕೆ ಏರಿಸುತ್ತಿರುವ ಸರ್ಕಾರದ ಕ್ರಮವನ್ನು ಖಂಡಿಸಿ ಎಡ ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟ-ಕರ್ನಾಟಕ ನೇತೃತ್ವದಲ್ಲಿ ಇಂದು ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಉಪವಿಭಾಗಾಧಿಕಾರಿ ಕಚೇರಿ ಆವರಣದಲ್ಲಿ ಜಮಾಯಿಸಿದ್ದ ಸಂಘಟನೆಯ ಪದಾಧಿಕಾರಿಗಳು, ಹಾಗೂ ಭಾಷಾ ನೀತಿಯಲ್ಲಿ ಮಾತೃ ಭಾಷೆಯನ್ನು ಒಂದು ವರ್ಷಕ್ಕೆ ಸೀಮಿತಗೊಳಿಸುತ್ತಿರುವುದಕ್ಕೂ ಸಹ ಅಸಮಾಧಾನ ವ್ಯಕ್ತಪಡಿಸಿದರು. ನಂತರ ಉಪವಿಭಾಗಾಧಿಕಾರಿ ಮುಖೇನ ಉನ್ನತ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿದರು.



ಮಾತೃ ಭಾಷಾ ಕಲಿಕೆಯನ್ನು ಒಂದು ವರ್ಷಕ್ಕೆ ಸೀಮಿತಿಗೊಳಿಸುವ ಪ್ರಯತ್ನವೂ ನಡೆಯುತ್ತಿದೆ. ಇದೆಲ್ಲವನ್ನೂ ರಾಜ್ಯ ಸರ್ಕಾರ ದೇಶದಲ್ಲಿ ನಾವೇ ಮೊದಲು ಜಾರಿ ಮಾಡುತ್ತೇವೆ ಎಂದು ಹೊರಟಿದೆ ಎಂದು ಪ್ರತಿಭಟನಾಕಾರರು ಆಕ್ಷೇಪಿಸಿದರು.

ಬೆಳೆಯುವ ಕುಡಿಗಳಲ್ಲಿ ಅಸಮಾನತೆಯನ್ನು ಬಿತ್ತುವ ಶಿಕ್ಷಣ ವ್ಯವಸ್ಥೆಯ ಬದಲಾಗಿ ಸಮಾನತೆ ಮತ್ತು ಸೌಹಾರ್ದತೆಯ ನಿರ್ಮಾಣಕ್ಕಾಗಿ ಸಮಾನ ಶಿಕ್ಷಣದ ಕೂಗು ಇದ್ದರೂ ಸರ್ಕಾರ ತಲೆ ಕೆಡಿಸಿಕೊಂಡಿಲ್ಲ. ಇನ್ನು ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರ ಜಿಡಿಪಿಯ ಶೇ. 6ರಷ್ಟು ಅಥವಾ ರಾಜ್ಯ ಬಜೆಟ್ ನ ಶೇ. 24ರಷ್ಟು ಮೀಸಲಿಡಬೇಕೆಂದು ಶಿಕ್ಷಣ ಆಯೋಗಗಳು, ಶಿಕ್ಷಣ ತಜ್ಞರು ಶಿಫಾರಸ್ಸು ಮಾಡುತ್ತಿದ್ದಾರಲ್ಲದೆ, ಇವುಗಳಿ ಗಾಗಿ ಯಾವುದೇ ಸರ್ಕಾರಗಳಾಗಲೀ, ಸಚಿವರಾಗಲೀ ತುರ್ತು ಸಮಿತಿಗಳು ರಚಿಸಿ ವರದಿ ಕೇಳಲಿಲ್ಲ. ಅನುಷ್ಠಾನಕ್ಕೆ ಉತ್ಸುಕರಾಗುತ್ತಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ವಿಧಾನ ಮಂಡಲದಲ್ಲಿ ಎನ್.ಇ.ಪಿ -2020 ರ ಸಮಗ್ರ ಚರ್ಚೆ ಆಗಬೇಕು. ಮಾತೃ ಭಾಷಾ ಕನ್ನಡ ಕಲಿಕೆ ಎಲ್ಲಾ ಹಂತದಲ್ಲಿಯೂ ಇರಬೇಕು ಮತ್ತು ಮಾತೃ ಭಾಷೆಯಲ್ಲಿ ವ್ಯಾಸಂಗ ಮಾಡಿದವರಿಗೆ ಆದ್ಯತೆಯ ಮೇರೆಗೆ ಶಿಷ್ಯ ವೇತನ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡುವ ನಿಟ್ಟಿನಲ್ಲಿ ನೀತಿಗಳನ್ನು ರೂಪಿಸಬೇಕು. ರಾಜ್ಯದ ಶಿಕ್ಷಣ ಹಕ್ಕುದಾರರೊಂದಿಗೆ (ವಿದ್ಯಾರ್ಥಿಗಳು, ಪೋಷಕರು, ಶಿಕ್ಷಣ ತಜ್ಞರು, ವಿದ್ಯಾರ್ಥಿ ಸಂಘಟನೆಗಳು ) ಎನ್.ಇ.ಪಿ 2020 ರ ಕುರಿತಂತೆ ಸಮಗ್ರವಾಗಿ ಚರ್ಚಿಸಬೇಕು, ಸಮಿತಿಯೊಂದಿಗೆ ನಡೆಯುವ ಚರ್ಚೆ ಮತ್ತು ವರದಿಗಳನ್ನು ಪಾರದರ್ಶಕವಾಗಿರಿಸಬೇಕು, ಅವುಗಳು ಎಲ್ಲರಿಗೂ ತಲುಪುವಂತೆ ಕಾಲಕಾಲಕ್ಕೆ ಪ್ರಕಟಿಸಬೇಕು, ಈ ಎಲ್ಲಾ ವಿಷಯಗಳು ಬಗೆಹರೆಯವವರೆಗೂ ರಾಜ್ಯದಲ್ಲಿ ಎನ್.ಇ.ಪಿ 2020 ಅನ್ನು ಜಾರಿ ಮಾಡಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಐಎಸ್ ಎಫ್ ರಾಜ್ಯ ಕಾರ್ಯದರ್ಶಿ ಹೆಚ್. ರಮೇಶ್ ನಾಯ್ಕ, ಕೆವಿಎಸ್ ಜಿಲ್ಲಾ ಸಂಚಾಲಕ ಸತೀಶ್ ಅರವಿಂದ್, ಎಸ್ ಎಫ್ ಐ ಜಿಲ್ಲಾ ಸಂಚಾಲಕ ಲಕ್ಷ್ಮಣ ರಮಾವತ್, ಯುವ ಕಾಂಗ್ರೆಸ್ ಉಪಾಧ್ಯಕ್ಷ ಡಿ.ಸಿ. ರಾಕೇಶ್ ಮತ್ತಿತರರು ಭಾಗವಹಿಸಿದ್ದರು.

# ಮಲ್ಲಿಕಾರ್ಜುನ್ ದೂರದೃಷ್ಟಿಯಿಂದ ಜನಪರ ಕೆಲಸಗಳು

(1ನೇ ಪುಟದಿಂದ) ಸಚಿವರು ಲೋಕಾರ್ಪಣೆಗೊಳಿಸಿದರು.

ಈ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಮಾತನಾಡಿದ ಎಸ್ಸೆಸ್, ತಾವು ಸಚಿವರಾಗಿದ್ದ ವೇಳೆ ನಗರವು ಸ್ಮಾರ್ಟ್ ಸಿಟಿಗೆ ಮೊದಲ ಹಂತದಲ್ಲೇ ಆಯಿತು. ಇದಕ್ಕೆ ಅಂದಿನ ಶಾಸಕ ಶಾಮನೂರು ಮಲ್ಲಿಕಾರ್ಜುನ್ ಮತ್ತು ಅಂದಿನ ಮಹಾನಗರ ಪಾಲಿಕೆ ಆಡಳಿತವೇ ಕಾರಣವಾಗಿದೆ ಎಂದರು.

ನಂತರ ಶಾಮನೂರು ಮಲ್ಲಿಕಾರ್ಜುನ್ ಅವರ ಅಧ್ಯಕ್ಷತೆಯಲ್ಲಿ ಅವರ ದೂರದೃಷ್ಟಿಯ ಫಲವಾಗಿ ಅನೇಕ ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು. ಇದರ ಯಶಸ್ಸು, ಕೀರ್ತಿ ಮಲ್ಲಿಕಾರ್ಜುನ್ ಮತ್ತು ಹಿಂದಿನ ಮಹಾನಗರ ಪಾಲಿಕೆ ಹಾಗೂ ಸ್ಮಾರ್ಟ್‌ಸಿಟಿ ಸದಸ್ಯರಿಗೆ ಸಲ್ಲುತ್ತದೆ ಎಂದು ಎಸ್ಸೆಸ್ ಪ್ರಶಂಸಿಸಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕ್ರೀಡಾಂಗಣ ನಿರ್ಮಾಣವಾಗಬೇಕೆಂಬ ಈ ಭಾಗದ ಕ್ರೀಡಾಪಟುಗಳ ಬೇಡಿಕೆ ಇಂದು ಈಡೇರಿದಂತಾಗಿದ್ದು, ಸುಮಾರು 6 ಎಕರೆ ಪ್ರದೇಶದಲ್ಲಿ 8 ಕೋಟಿ ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣವಾಗಲಿದೆ. ಜೊತೆಗೆ ಕ್ರೀಡಾಂಗಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಈ ಭಾಗದಲ್ಲಿ ಹಳೇ ಹೆರಿಗೆ ಆಸ್ಪತ್ರೆ ಇದ್ದರೂ ಸಹ ಹೆರಿಗೆ ಆಸ್ಪತ್ರೆ ನಿರ್ಮಾಣಕ್ಕೆ ಒತ್ತು ನೀಡಿ, 1.35 ಕೋಟಿ ರೂ. ವೆಚ್ಚದಲ್ಲಿ 18 ಹಾಸಿಗೆವುಳ್ಳ ನೆಲಮಹಡಿ ಮತ್ತು ಮೊದಲ ಮಹಡಿ ಕಟ್ಟಡವನ್ನು ಸಚಿವರು ಸಾರ್ವಜನಿಕರಿಗೆ ಸಮರ್ಪಿಸಿದರು ಎಂದು ಅವರು ಹೇಳಿದರು.

ಶಾಮನೂರು ಮಲ್ಲಿಕಾರ್ಜುನ್ ಕ್ರೀಡಾ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ, ದೇವರಾಜ ಅರಸು ಬಡಾವಣೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಈಜುಕೊಳವನ್ನು ನಿರ್ಮಿಸಲಾಗಿತ್ತು. ಕಾರಣಾಂತರಗಳಿಂದ ಕೆಲವು ವರ್ಷಗಳಿಂದ ಈಜುಕೊಳ ಸಾರ್ವಜನಿಕರ ಬಳಕೆಗೆ ಬಾರದ ಕಾರಣದಿಂದ 5 ಕೋಟಿ ರೂ. ವೆಚ್ಚದಲ್ಲಿ ನವೀಕೃತ ಗೊಳಿಸಲು ಸಿದ್ದತೆ ಮಾಡಲಾಗಿತ್ತು. ಇಂದು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಸುಮಾರು ಎರಡೂಕಾಲು ಕೋಟಿ ರೂ. ವೆಚ್ಚದಲ್ಲಿ ಈಜುಕೊಳ ನವೀಕೃತಗೊಂಡು ಶೀಘ್ರ ಸಾರ್ವಜನಿಕರ ಬಳಕೆಗೆ ಲಭಿಸಲಿದೆ ಎಂದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆಗಳ ಸುಧಾರಣೆಗಾಗಿ ಸುಮಾರು 3 ಕೋಟಿ ವೆಚ್ಚದಲ್ಲಿ ಚಾಮರಾಜಪೇಟೆ ಮೇನ್, ಭಾರತ್ ಕಾಲೋನಿ, ಬಸಾಪುರ, ಗಡಿ ಯಾರ ಕಂಬ, ಕರೂರು ಸರ್ಕಾರಿ ಶಾಲೆಗಳಲ್ಲಿ 20 ಕೊಠಡಿಗಳು ಮತ್ತು ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದ್ದು, ಸರ್ಕಾರಿ ಶಾಲಾ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿರುವಂತೆ ವಾತಾವರಣ ಕಲ್ಪಿಸಲಾಗುವುದು ಎಂದರು.

ವೀರ ಮದಕರಿ ನಾಯಕ ವೃತ್ತದ ಬಳಿ ದುರ್ಗಾಂಬಿಕಾ ಸಮುದಾಯ ಭವನವನ್ನು 3.28 ಕೋಟಿ ರೂ.ಗಳ ವೆಚ್ಚದಲ್ಲಿ ಶಾಮನೂರು ಮಲ್ಲಿಕಾರ್ಜುನ್ ಅವರ ಸಲಹೆಯಂತೆ ಆಧುನಿಕ ಸ್ಪರ್ಶದೊಂದಿಗೆ ನಿರ್ಮಾಣಗೊಂಡಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸಂಸದ ಜಿ.ಎಂ.ಸಿದ್ದೇಶ್ವರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ರಿಷ್ಯಂತ್, ಮಹಾಪೌರ ಎಸ್.ಟಿ.ವೀರೇಶ್, ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಸದಸ್ಯರುಗಳಾದ ಎ.ಬಿ.ರಹೀಂಸಾಬ್, ಕೆ. ಚಮನ್‌ಸಾಬ್, ವಿನಾಯಕ ಪೈಲ್ವಾನ್, ಕಬೀರ್, ಜಾಕೀರ್‌ಅಲಿ, ಶ್ರೀಮತಿ ಹುರ್‌ಬಾನು (ಪಂಡಿತ್), ಉದಯ್‌ಕುಮಾರ್, ದೂಡಾ ಅಧ್ಯಕ್ಷ ಶಿವಕುಮಾರ್, ಮಾಜಿ ಅಧ್ಯಕ್ಷ ಅಯೂಬ್ ಪೈಲ್ವಾನ್, ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಕೊಡಪಾನ ದಾದಾಪೀರ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಜಗಳೂರಿನಲ್ಲಿ ಕಾಮಗಾರಿಗಳಿಗೆ ಚಾಲನೆ



(1ನೇ ಪುಟದಿಂದ) ಜಗಳೂರು ತಾಲ್ಲೂಕು ಬರಪೀಡಿತವೆಂಬ ಹಣೆಪಟ್ಟಿ ಕಟ್ಟಿಕೊಂಡಿತ್ತು. ಸ್ಥಳೀಯ ಶಾಸಕರ ಶ್ರಮದ ಫಲವಾಗಿ 1,200 ಕೋಟಿ ರೂ. ಕಾಮಗಾರಿಗಳು ತಾಲ್ಲೂಕಿನಲ್ಲಿ ನಡೆಯುತ್ತಿದ್ದು, ತಾಲ್ಲೂಕು ಪ್ರಗತಿಯತ್ತ ಸಾಗುತ್ತಿದೆ. ಭದ್ರಾ ಮೇಲ್ದಂಡೆಯಿಂದ ತಾಲ್ಲೂಕಿಗೆ ನೀರು ಹರಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದರು.

ಕಾಮಗಾರಿಗಳಲ್ಲಿ ಪ್ರಮುಖ ಪಾತ್ರ ಕಾರ್ಮಿಕರದ್ದು. ಆದ್ದರಿಂದ ಕಾರ್ಮಿಕರು ಯಾವುದೇ ಸಂದರ್ಭದ ಲ್ಲಿಯೂ ಹಸಿವಿನಿಂದ ಬಳಲಬಾ ರದು. ಅದಕ್ಕಾಗಿ ಸಾಂಕೇತಿಕವಾಗಿ ಕಾರ್ಮಿಕರಿಗೆ 300 ಫುಡ್‌ಕಿಟ್‌ಗಳನ್ನು ವಿತರಿಸಲಾಗುತ್ತಿದೆ. ತಾಲ್ಲೂಕಿಗೆ ಒಟ್ಟು ಸರ್ಕಾರದಿಂದ 3000 ಕಿಟ್‌ಗಳನ್ನು ಈಗಾಗಲೇ ನೀಡಲಾಗಿದೆ ಎಂದು ತಿಳಿಸಿದ ಸಚಿವರು, ಕೋವಿಡ್‌ನಿಂದ ಮೃತಪಟ್ಟ ಕೆಲ ಕುಟುಂಬಗಳಿಗೆ ವೈಯಕ್ತಿಕವಾಗಿ ಧನಸಹಾಯ ಮಾಡಿದರು.

ಸಂಸದ ಜಿ.ಎಂ.ಸಿದ್ದೇಶ್ವರ ಮಾತನಾಡಿ, ದಾವಣಗೆರೆಯನ್ನು ಮಾದರಿ ಜಿಲ್ಲೆಯನ್ನಾಗಿ ಮಾಡಲು ಶ್ರಮಿಸುತ್ತಿದ್ದೇವೆ. ತಾಲ್ಲೂಕಿನಲ್ಲಿ ಅನೇಕ ಕಾಮಗಾರಿಗಳಿಗೆ 1,200 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದರು.

ಶಾಸಕ ಎಸ್.ವಿ. ರಾಮಚಂದ್ರಪ್ಪ ಮಾತನಾಡಿ, ಸರ್ಕಾರ ನೀಡಿರುವ 1,200 ಕೋಟಿ ರೂ.ಅನುದಾನದಲ್ಲಿ ಜಗಳೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಹಮ್ಮಿಕೊಂಡಿರುವ ಕಾಮಗಾರಿಗಳ ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಸಿಇಒ ಡಾ.ವಿಜಯ ಮಹಾಂತೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಡಿಹೆಚ್ಒ ಡಾ. ನಾಗರಾಜ್ ಸೇರಿದಂತೆ ಜಿಲ್ಲಾ, ತಾಲ್ಲೂಕು ಅಧಿಕಾರಿಗಳು ಉಪಸ್ಥಿತರಿದ್ದರು.

# ಕಟ್ಟಡ ಉದ್ಘಾಟಿಸಿ ವೇದಿಕೆಗೆ ಆಗಮಿಸದ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು



ಓದುಗರ ಪತ್ರ

ಮಾನ್ಯರೇ,

ದಾವಣಗೆರೆಯಲ್ಲಿ ಮಂಗಳವಾರ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ಹಾಗೂ ಹೊಂಡದ ಸರ್ಕಲ್‌ನಲ್ಲಿ ನಗರ ದೇವತೆ ದುರ್ಗಾಂಬಿಕಾ ಸಮುದಾಯ ಭವನ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದರು.

ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ನವರು ಅತಿಥಿಗಳು ಮಾತನಾಡಲು ವ್ಯವಸ್ಥಿತ ವೇದಿಕೆ ನಿರ್ಮಿಸಿದ್ದರೂ ಸಹ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಂಸದರು ಮಾತನಾಡದೆ ತರಾತುರಿಯಲ್ಲಿ ನಿರ್ಗಮಿಸಿದ್ದು ನೋಡಿದರೆ, ಬೇರೆಯವರು ಮಾಡಿದ ಅಭಿವೃದ್ಧಿ ಕೆಲಸಗಳನ್ನು ತಾವು ಬಂದು ಉದ್ಘಾಟನೆ ಮಾಡಿದಾಗ ಆಗುವ ಮುಜುಗರ ತಪ್ಪಿಸಿಕೊಳ್ಳಲು ಈ ರೀತಿ ಮಾಡಿರಬಹುದೇ ? ಎನಿಸದೇ ಇರದು.

ಸಭೆಯಲ್ಲಿ ಭಾಗವಹಿಸಿ ಮಾತನಾಡಿದಾಗ ಇದರ ಬಗ್ಗೆ ಚರ್ಚೆಯಾಗ ಬಹುದು ಎಂಬ ಯೋಚನೆಯಿಂದ ಪಲಾಯನ ಮಾಡಿದರೋ ಅಥವಾ ಇದಕ್ಕಿಂತಲೂ ಮುಖ್ಯವಾದ ಕೆಲಸ ವಿತ್ತೇ ಎಂದು ಅವರೇ ಉತ್ತರಿಸಬೇಕು.

ಆದರೆ, ಅತ್ಯುತ್ತಮವಾಗಿ ಕಾರ್ಯಕ್ರಮ ಆಯೋಜಿಸಿದ್ದ ಸ್ಮಾರ್ಟ್ ಸಿಟಿ ಹಣ ಪೋಲಾಗಿದ್ದು ಸತ್ಯ.

**- ಕೆ.ಎಲ್.ಹರೀಶ್ ಬಸಾಪುರ**, ದಾವಣಗೆರೆ

# ಎಲ್ಲ ಮನೆಗಳಿಗೂ ನಲ್ಲಿ ಸಂಪರ್ಕ

(1ನೇ ಪುಟದಿಂದ) ಕಾರ್ಯಕ್ರಮವನ್ನು ನಿಗದಿತ ಅವಧಿಯೊಳಗೇ ಪೂರ್ಣಗೊಳಿಸುವಂತೆ ಕೇಂದ್ರ ಸಚಿವರು ಸಲಹೆ ನೀಡಿದ್ದಾರೆ.

ಜಲಜೀವನ್ ಮಿಷನ್ ಯೋಜನೆ ಮೂಲಕ 2024ರ ವೇಳೆಗೆ ದೇಶದ 18.93 ಕೋಟಿ ಗ್ರಾಮೀಣ ಮನೆಗಳಲ್ಲಿ 15.70 ಕೋಟಿ ಮನೆಗಳಿಗೆ ಕ್ರಿಯಾತ್ಮಕ ನಳ ಸಂಪರ್ಕ ನೀಡುವ ಗುರಿ ಹೊಂದಲಾಗಿದೆ. ಈ ಯೋಜನೆಯಡಿ ಕೇವಲ ಸೌಲಭ್ಯ ಕಲ್ಪಿಸುವುದು ಮಾತ್ರವಲ್ಲ, ನಿರಂತರವಾಗಿ ಕುಡಿಯುವ ನೀರು ಒದಗಿಸುವುದು ಸರ್ಕಾರದ ಆದ್ಯತೆ. ಅಂತೆಯೇ ರಾಜ್ಯದಲ್ಲಿ ಆದ್ಯತಾ ಜಿಲ್ಲೆಗಳಾದ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಕ್ರಿಯಾತ್ಮಕ ನಳ ಸಂಪರ್ಕಗಳಿಗೆ ಆದ್ಯತೆ ಎಂದರು.

ನಳ ಸಂಪರ್ಕ ನೀಡುವುದರೊಂದಿಗೆ ಪೂರೈಸುವ ನೀರಿನ ಗುಣಮಟ್ಟವನ್ನೂ ಖಾತರಿ ಪಡಿಸುವಂತೆ ಸಚಿವರು ಸಲಹೆ ನೀಡಿದ್ದಾರೆ.

ರಾಜ್ಯದ 91.19 ಲಕ್ಷ ಗ್ರಾಮೀಣ ಕುಟುಂಬಗಳಿಗೆ ತಲಾ 55 ಎಲ್.ಪಿ.ಸಿ.ಡಿ. ಶುದ್ಧ ನೀರು ಒದಗಿಸುವ ಗುರಿ ಇದೆ. ಈ ಯೋಜನೆಯಡಿ 2021-22 ನೆ ಆರ್ಥಿಕ ವರ್ಷದಲ್ಲಿ 25.17 ಲಕ್ಷ ಮನೆಗಳಿಗೆ ಕ್ರಿಯಾತ್ಮಕ ನಳ ಸಂಪರ್ಕ ಒದಗಿಸಲು ಉದ್ದೇಶಿಸಲಾಗಿದೆ. 2022-23 ರಲ್ಲಿ 27.15 ಲಕ್ಷ ಹಾಗೂ 2023 ಡಿಸೆಂಬರ್ ಅಂತ್ಯದ ವೇಳೆಗೆ 10.72 ಲಕ್ಷ ಮನೆಗಳಿಗೆ ಕ್ರಿಯಾತ್ಮಕ ನಳ ಸಂಪರ್ಕ ಒದಗಿಸುವ ಗುರಿ ಹೊಂದಲಾಗಿದೆ ಎಂದು ವಿವರಿಸಿದರು.

# ಬದಲಿಸಲು ಮನವಿ

(1ನೇ ಪುಟದಿಂದ) ಕಾಯ್ದೆಯ ಅನ್ವಯ ಹೊಸ ಸಂಖ್ಯೆ ನೀಡುವ ಅಧಿಕಾರ ಯು.ಐ.ಡಿ.ಎ.ಐ.ಗೆ ಇದೆ. ಹೊಸ ಸಂಖ್ಯೆ ನೀಡಲಾಗದು ಎಂದಿದ್ದರೆ ಕಾಯ್ದೆಯಲ್ಲಿ ಈ ಅಂಶ ಇರುತ್ತಿರ ಲಿಲ್ಲ ಎಂದು ತಿಳಿಸಿದೆ. ಆದರೂ, ಆಧಾರ್ ಸಂಖ್ಯೆಯನ್ನು ಬಳಕೆದಾರರು ಮನಸೋ ಇಚ್ಛೆ ಬದಲಿಸಿಕೊಳ್ಳಲು ಅವಕಾಶವಿಲ್ಲ ಎಂದು ನ್ಯಾಯಾಲಯ ಹೇಳಿದೆ.

ನನಗೆ ತಿಳಿಯದೇ ಇರುವ ವಿದೇಶಿ ಸಂಸ್ಥೆ ಗಳು ನನ್ನ ಆಧಾರ್ ಸಂಖ್ಯೆ ಬಳಸಿಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ಹೊಸ ಸಂಖ್ಯೆ ನೀಡುವಂತೆ ಯು.ಐ.ಡಿ.ಎ.ಐಗೆ ಮನವಿ ಸಲ್ಲಿಸಿದ್ದೆ. ಆದರೆ, ಯಾವುದೇ ವ್ಯಕ್ತಿಗೆ ಇನ್ನೊಂದು ಆಧಾರ್ ಸಂಖ್ಯೆ ನೀಡಲಾಗದು. ಅಂತಹ ಪ್ರಕ್ರಿಯೆ ಲಭ್ಯವಿಲ್ಲ ಎಂದು ಯುಐಎಡಿಐಎ ತಿಳಿಸಿದೆ ಎಂದು ಅರೋರ ಅರ್ಜಿಯಲ್ಲಿ ಹೇಳಿದ್ದರು. ಹೊಸ ಆಧಾರ್ ಸಂಖ್ಯೆ ನೀಡಲು ಕಾಯ್ದೆಯಲ್ಲಿ ಅವಕಾಶವಿದೆ. ಆದರೂ, ಯುಐಡಿಎಐ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಆಧಾರ್ ಅನ್ನು ವಿದೇಶಿ ಸಂಸ್ಥೆಯ ಜೊತೆ ಜೋಡಣೆ ಮಾಡಿ ರುವು ದರಿಂದ ತಮಗೆ ಸಮಸ್ಯೆಯಾಗು ತ್ತಿದೆ ಎಂದವರು ತಿಳಿಸಿದ್ದರು. ಸೆಪ್ಟೆಂಬರ್ 9ರಂದು ಮುಂದಿನ ವಿಚಾರಣೆ ನಡೆಯಲಿದೆ.

# ಎಲ್. ಬಸವರಾಜ್‌ಗೆ ಸನ್ಮಾನ



ದಾವಣಗೆರೆ, ಜು.13- ನಗರದ ನ್ಯಾಯವಾದಿಗಳೂ, ರಾಜಕೀಯ ಮುಖಂಡರೂ ಆದ ಎಲ್. ಬಸವರಾಜ್ ಅವರನ್ನು ಬಾಡಿಗೆದಾರರ ವತಿಯಿಂದ ಸನ್ಮಾನಿಸಲಾಯಿತು. ಕಟ್ಟಡ ಬಾಡಿಗೆದಾರರ ಮಾಸಿಕ ಬಾಡಿಗೆಯಲ್ಲಿ ವಿನಾಯತಿ ನೀಡಿ ಮಾನವೀಯತೆ ಮೆರೆದ, ಇತ್ತೀಚಿಗೆ ಅನಾರೋಗ್ಯದಿಂದ ಬಳಲುತ್ತಿದ್ದ ಎಲ್. ಬಸವರಾಜ್ ಅವರನ್ನು ಬಾಡಿಗೆದಾರರು ಅಭಿನಂದಿಸಿ, ಬಸವರಾಜ್ ಅವರ ಹೃದಯ ವೈಶಾಲ್ಯತೆಯನ್ನು ಕೊಂಡಾಡಿದರು.

ಈ ಸಂದರ್ಭದಲ್ಲಿ ಶ್ಯಾಗಲೆ ಬಸವರಾಜಪ್ಪ ಮೇಷ್ಟ್ರು, ಸೋಮಣ್ಣ, ಸತೀಶ್, ಪ್ರಕಾಶ್, ವಕೀಲರಾದ ಎಸ್.ಆರ್. ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು.

# ನಗರದ ಸವಿತಾ ಸಮಾಜದವರಿಗೆ ಇಂದು ಲಸಿಕಾ ಶಿಬಿರ

ಜಿಲ್ಲಾಡಳಿತದಿಂದ ಸವಿತಾ ಸಮಾಜದ ಸಮುದಾಯದವರಿಗೆ ಕೊಂಡಜ್ಜಿ ರಸ್ತೆಯಲ್ಲಿರುವ ಸವಿತಾ ಸಮಾಜ ಸಮುದಾಯ ಭವನದ ಕಟ್ಟಡದಲ್ಲಿ ಇಂದು ಬೆಳಿಗ್ಗೆ 10 ಕ್ಕೆ ಉಚಿತ ಕೊರೊನಾ ಲಸಿಕಾ ಶಿಬಿರ ನಡೆಯಲಿದೆ.

ಸವಿತಾ ಸಮಾಜದ ಬಂಧುಗಳು ಈ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಸವಿತಾ ಸಮಾಜದ ಅಧ್ಯಕ್ಷ ಎನ್.ರಂಗಸ್ವಾಮಿ, ಕಾರ್ಯದರ್ಶಿ ಜಿ.ಎಸ್. ಪರಶುರಾಮ್, ಖಜಾಂಚಿ ಆರ್. ಕರಿಬಸಪ್ಪ ವಿನಂತಿಸಿಕೊಂಡಿದ್ದಾರೆ.

# ನಗರದಲ್ಲಿ ಇಂದು ಶಿಕ್ಷಣ ಯೋಗಿ ಕೃತಿ ಲೋಕಾರ್ಪಣೆ





ಸೌಹಾರ್ದ ಪ್ರಕಾಶನದಿಂದ ಹೆಚ್.ಕೆ.ಲಿಂಗರಾಜು ಅವರ ಅಭಿನಂದನಾ ಗ್ರಂಥ 'ಶಿಕ್ಷಣ ಯೋಗಿ' ಎರಡನೇ ಮುದ್ರಣ ಗ್ರಂಥದ ಲೋಕಾರ್ಪಣೆ ಕಾರ್ಯ ಕ್ರಮವು ಹೆಚ್.ಕೆ.ಲಿಂಗರಾಜು ಅವರ ಸ್ವಗೃಹದಲ್ಲಿ ಇಂದು ನಡೆಯ ಲಿದೆ ಎಂದು ಸೌಹಾರ್ದ ಪ್ರಕಾಶನದ ಪ್ರಕಾಶಕರೂ ಆಗಿರುವ ಹಿರಿಯ ಸಾಹಿತಿ ಶ್ರೀಮತಿ ಎ.ಸಿ.ಶಶಿಕಲಾ ಶಂಕರಮೂರ್ತಿ ತಿಳಿಸಿದ್ದಾರೆ.

ಪ್ರೊ. ವೈ. ವೃಷಭೇಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಡಾ.ಹೆಚ್.ಬಿ. ಅರವಿಂದ್ ಅವರು ಗ್ರಂಥವನ್ನು ಬಿಡುಗಡೆ ಮಾಡುವರು. ಸಿ.ಹೆಚ್.ಮುರಿಗೇಂದ್ರಪ್ಪ ಮುಖ್ಯ ಅತಿಥಿಯಾಗಿದ್ದಾರೆ.

# ಸೂರಗೊಂಡನಕೊಪ್ಪಕ್ಕೆ ನಾಳೆ ಡಿ.ಕೆ. ಶಿವಕುಮಾರ್



ದಾವಣಗೆರೆ, ಜು.13- ಕೊರೊನಾ ಸೋಂಕಿಗೆ ಬಲಿಯಾದ ಕುಟುಂಬದವರ ಮನೆಗಳಿಗೆ ಭೇಟಿ ನೀಡಿ ಸಾಂತ್ವನ ಹೇಳುವ ಕಾರ್ಯ ಕ್ರಮಕ್ಕೆ ನ್ಯಾಮತಿ ತಾಲ್ಲೂಕಿನ ಕಂಚಿಗನಾಳ್ ತಾಂಡಾದಿಂದ ಚಾಲನೆ ನೀಡಲಾಗುವುದು.

ಈ ಸಂಬಂಧ ನ್ಯಾಮತಿ ತಾಲ್ಲೂಕು ಸೂರಗೊಂಡನ ಕೊಪ್ಪಕ್ಕೆ ನಾಡಿದ್ದು ದಿನಾಂಕ 15 ರಂದು ಬೆಳಿಗ್ಗೆ 10.30 ಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭೇಟಿ ನೀಡಿ ಬಂಜಾರ ಸಮುದಾಯದ ಮುಖಂಡ ರೊಂದಿಗೆ ಸಮಾಜದ ಆಗು-ಹೋಗುಗಳ ಬಗ್ಗೆ ಸಂವಾದ ನಡೆಸಲಿದ್ದಾರೆ ಎಂದು ಮಾಜಿ ಸಚಿವ ಬಾಬುರಾವ್ ಚವ್ಹಾಣ್ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಪ್ರತಿಭಟನೆ

ಬೂದಾಳ್ ರಸ್ತೆಯಲ್ಲಿ ಅನಧಿಕೃತ ಬಡಾವಣೆಗಳೆಂದು ಪರಿಗಣಿಸಿ ಮನೆಗಳನ್ನು ತೆರವುಗೊಳಿಸಲು ಮುಂದಾಗಿರುವ ದೂಡಾದ ಕ್ರಮವನ್ನು ಬೂದಾಳ್ ರಸ್ತೆ ನಾಗರಿಕರ ಹಿತರಕ್ಷಣಾ ವೇದಿಕೆ ವಿರೋಧಿಸಿದೆ.

ಈ ಹಿನ್ನೆಲೆಯಲ್ಲಿ ದೂಡಾಕ್ಕೆ ಇಂದು ಮುತ್ತಿಗೆ ಹಾಕಲಾಗುವುದು ಎಂದು ವೇದಿಕೆ ತಿಳಿಸಿದೆ.

## ಪತ್ರ ಕಳೆದಿದೆ

ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಹೊನ್ನಮರಡಿ, ಆಂಜನೇಯ ನಗರದ ವಾಸಿಯಾದ ವೀರಮ್ಮ ಕೋಂ. ಲೇಟ್ ಸಣ್ಣ ತಮ್ಮಪ್ಪ ಆದ ನಾನು ದಾವಣಗೆರೆ ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ 10.08.1993 ರಂದು 1ನೇ ಪುಸ್ತಕದ 2164ನೇ ಸಂಪುಟದ 205-206ನೇ ಪುಟಗಳಲ್ಲಿ 93ನೇ ಇಸ್ವಿ 2820ನೇ ನಂಬರಿಗೆ ರಿಜಿಸ್ಟರ್ ಆಗಿರುವ ಕ್ರಯಪತ್ರವು, ಆಧಾರ್ ಕಾರ್ಡ್, ಸಣ್ಣತಮ್ಮಪ್ಪ ಕುಳಗೇರಿಯವರ ಡೆತ್ ಸರ್ಟಿಫಿಕೇಟ್ ಹಾಗೂ 1000 ರೂ. ನಗದು ಹಣ ಇರುವ ಬ್ಯಾಗ್ ದಿನಾಂಕ : 10.7.2021ನೇ ಶನಿವಾರ ಬೈಕ್‌ನಲ್ಲಿ ದಾವಣಗೆರೆಗೆ ಬರುವಾಗ ಕಳೆದಿರುತ್ತದೆ. ಸಿಕ್ಕವರು ಹತ್ತಿರದ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.

**ಫೋನ್ ; 77600 28538**






## ತಮಿಳು ನಟ ವಿಜಯ್‌ಗೆ ಲಕ್ಷ ರೂ. ದಂಡ

ಚೆನ್ನೈ, ಜು. 13 – ತೆರಿಗೆ ಪಾವತಿಸದ ತಮಿಳು ನಟ ವಿಜಯ್‌ರನ್ನು ತರಾಟೆಗೆ ತೆಗೆದುಕೊಂಡಿರುವ ಮದ್ರಾಸ್ ಹೈಕೋರ್ಟ್, 1 ಲಕ್ಷ ರೂ.ಗಳ ದಂಡ ವಿಧಿಸಿದೆ. 2012ರಲ್ಲಿ ಇಂಗ್ಲೆಂಡ್‌ನಿಂದ ರೋಲ್ಸ್ ರಾಯ್ಸ್ ಘೋಸ್ಟ್ ಕಾರು ಆಮದು ಮಾಡಿಕೊಂಡಾಗ ತೆರಿಗೆ ಪಾವತಿ ಮಾಡಿರಲಿಲ್ಲ.

ಅರ್ಜಿದಾರರು ದುಬಾರಿ ಕಾರು ಆಮದು ಮಾಡಿಕೊಂಡಿದ್ದಾರೆ. ಆದರೆ, ಅದಕ್ಕಾಗಿ ತೆರಿಗೆ ಪಾವತಿ ಮಾಡಿಲ್ಲ. ಅರ್ಜಿದಾರ ಪ್ರತಿಷ್ಠಿತ ನಟರಾಗಿದ್ದು, ಪ್ರಾಮಾಣಿಕವಾಗಿ ತೆರಿಗೆ ಪಾವತಿಸುವ ನಿರೀಕ್ಷೆ ಇರುತ್ತದೆ. ಕೇವಲ ತೆರೆಯ ಮೇಲಷ್ಟೇ ನಾಯಕರಾಗದೇ, ನಿಜ ಜೀವನದಲ್ಲೂ ನಾಯಕರಾಗಿರಬೇಕು ಎಂದು ನ್ಯಾಯಮೂರ್ತಿ ಎಸ್.ಎಂ. ಸುಬ್ರಮಣ್ಯಂ ಹೇಳಿದ್ದಾರೆ.


# ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001.
96861 95327


## ಸರ್ಕಾರಿ ಶಾಲೆಯಲ್ಲಿ ಆಂಗ್ಲ ಮಾಧ್ಯಮ ಶಿಕ್ಷಣಕ್ಕೆ ಚಾಲನೆ

ಜಗಳೂರು, ಜು.13- ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತೆರೆಯುತ್ತಿರುವುದು ಮಕ್ಕಳ ಶಿಕ್ಷಣದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಎ.ಬಸವರಾಜ್ ತಿಳಿಸಿದರು.

ಶಿಕ್ಷಣ ಇಲಾಖೆಯಿಂದ ಜಗಳೂರು ತಾಲ್ಲೂಕಿನ ಪಲ್ಲಾಗಟ್ಟೆಯಲ್ಲಿ ಮಂಗಳವಾರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಒಂದನೇ ಹಾಗೂ ಎರಡನೇ ತರಗತಿ ಆಂಗ್ಲ ಮಾಧ್ಯಮ ಶಾಲೆ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

**ಘನತ್ಯಾಜ್ಯ ವಿಲೇವಾರಿ ಘಟಕ ಲೋಕಾರ್ಪಣೆ:** ಜಗಳೂರು ತಾಲ್ಲೂಕಿನ ಪಲ್ಲಾಗಟ್ಟೆ ಗ್ರಾಮದಲ್ಲಿ 11 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾದ ಘನ ತ್ಯಾಜ್ಯ ವಿಲೇವಾರಿ ಘಟಕವನ್ನು ಮಂಗಳವಾರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್, ಸಂಸದ ಜಿ.ಎಂ.ಸಿದ್ದೇಶ್ವರ ಲೋಕಾರ್ಪಣೆ ಮಾಡಿದರು.

## ದೇಶ ಆವರಿಸಿದ ಮುಂಗಾರು

ನವದೆಹಲಿ, ಜು. 13 - ಮುಂಗಾರು ಮಂಗಳವಾರದಂದು ಇಡೀ ದೇಶವನ್ನು ಆವರಿಸಿದೆ. ವಾಡಿಕೆಗಿಂತ ಐದು ದಿನ ವಿಳಂಬವಾಗಿ ಮುಂಗಾರು ಇಡೀ ದೇಶ ತಲುಪಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಸಾಮಾನ್ಯವಾಗಿ ಮುಂಗಾರು ಜುಲೈ 8ರಂದು ಇಡೀ ದೇಶವನ್ನು ಆವರಿಸುತ್ತದೆ. ರಾಜಸ್ಥಾನದ ಜೈಸಲ್ಮಾರ್ ಹಾಗೂ ಗಂಗಾಗನರ ತಲುಪುವುದರೊಂದಿಗೆ ಮುಂಗಾರು ದೇಶದ ಕೊನೆ ಭಾಗಕ್ಕೆ ತಲುಪಿದಂತಾಗಿದೆ.




॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥ ॥ ಶ್ರೀ ಕುರುವತ್ತಿ ಬಸವೇಶ್ವರ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ

ಶ್ರೀಮತಿ ಅನಸೂಯ ಕೆ.ಹೆಚ್. ಬಸವರಾಜಪ್ಪ ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 10.07.2021ನೇ ಶನಿವಾರ ಮಧ್ಯಾಹ್ನ 4.30ಕ್ಕೆ ನನ್ನ ಪೂಜ್ಯ ಪತಿಯವರಾದ
**ಕೆ.ಹೆಚ್. ಬಸವರಾಜಪ್ಪ** (ದಿ. ಶ್ರೀಮತಿ ಬಸಮ್ಮ ಹದಡಿ ದಿ.ಶ್ರೀ ಕುಂಚೂರು ವೀರಪ್ಪನವರ ಪುತ್ರ)
ಶಿವಾಧೀನರಾದ ಪ್ರಯುಕ್ತ ಲಿಂಗೈಕ್ಯರ ಆತ್ಮಶಾಂತಿಗಾಗಿ "ಕೈಲಾಸ ಶಿವಗಣಾರಾಧನೆ"ಯನ್ನು ದಿನಾಂಕ 14.07.2021 ನೇ ಬುಧವಾರ ಮಧ್ಯಾಹ್ನ 12.30ಕ್ಕೆ ಮೃತರ ಸ್ವಗೃಹ 6ನೇ ಮೇನ್, ಕುವೆಂಪು ನಗರ, ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು: ♦ ಶ್ರೀಮತಿ ಅನುಸೂಯ ಮತ್ತು ಮಕ್ಕಳು ♦ ಶ್ರೀಮತಿ ನಿರ್ಮಲ ಶ್ರೀ ಕೆ.ಬಿ. ಸುರೇಶ್, ♦ ಶ್ರೀಮತಿ ಸುನಿತ ಶ್ರೀ ಮಹೇಶ್ ♦ ಚಿ. ಪ್ರಣವ್ , ಕುಂಚೂರು ವಂಶಸ್ಥರು ಹಾಗೂ ಬಂಧು-ಮಿತ್ರರು

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

॥ ಶ್ರೀ ಆಂಜನೇಯ ಪ್ರಸನ್ನ ॥ ॥ ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ॥ ॥ ಶ್ರೀ ರೇಣುಕ ಯಲ್ಲಮ್ಮದೇವಿ ಕೃಪ ॥

### ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಆತ್ಮೀಯ ಬಂಧು-ಮಿತ್ರರೇ,
ನಮ್ಮ ಪೂಜ್ಯ ತಾಯಿಯವರಾದ
**ಶ್ರೀಮತಿ ರಾಮಮ್ಮ ಎರೇಬೂದಿಹಾಳು**
(ದಿ॥ ಶ್ರೀ ಕೋಟೆ ಬಸಪ್ಪನವರ ಧರ್ಮಪತ್ನಿ)
ಇವರು ದಿನಾಂಕ 04.07.2021ರ ಭಾನುವಾರ ಮಧ್ಯಾಹ್ನ 12.45ಕ್ಕೆ ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಸಮಾರಾಧನೆ'ಯನ್ನು
ದಿನಾಂಕ 14.07.2021ನೇ ಬುಧವಾರ ಬೆಳಿಗ್ಗೆ 10.30 ಕ್ಕೆ ಹರಿಹರ ತಾ॥ ಎರೇಬೂದಿಹಾಳು ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು :
- ಟಿ. ನಾಗರಾಜಪ್ಪ, ನಿವೃತ್ತ ಕಾರ್ಯಪಾಲಕ ಅಭಿಯಂತರರು, ದಾವಣಗೆರೆ.
- ಟಿ. ನೀಲಕಂಠಪ್ಪ, ನಿವೃತ್ತ ಎಸಿಎಫ್, ದಾವಣಗೆರೆ
- ಟಿ. ಮಲ್ಲೇಶಪ್ಪ, ಗ್ರಾಮ ಪಂಚಾಯ್ತಿ ಮಾಜಿ ಸದಸ್ಯರು, ಎರೇಬೂದಿಹಾಳು.
- ಟಿ. ಮುಕುಂದ, ಮಾಜಿ ಉಪಾಧ್ಯಕ್ಷರು, ಜಿಲ್ಲಾ ಪಂಚಾಯ್ತಿ, ದಾವಣಗೆರೆ.

ಮತ್ತು ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. ಎರೇಬೂದಿಹಾಳು ಗ್ರಾಮಸ್ಥರು.








JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte